ವಿದುರ ನೀತಿ



ಅನುವಾದ

ಎನ್. ರಂಗನಾಥಶರ್ಮಾ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು - ೫೬೦ ೦೧೮.

ವಿದುರ ನೀತಿ

(ಕುಮಾರವ್ಯಾಸನ ಕರ್ನಾಟ ಭಾರತ ಕಥಾಮಂಜರಿ)

ಅನು: ಎನ್. ರಂಗನಾಥಶರ್ಮಾ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

VIDURA NEETI Translation by : Sri N. Ranganatha Sharma
Published by: **Kannada Sahitya Parishat**
Pampa Mahakavi Road, Chamarajapet, Bangalore - 560018
Pages : V + 57 Price : **30-00 ; 2007**

ಮುದ್ರಣದ ವರ್ಷ : ೨೦೦೭
ಪ್ರತಿಗಳು : ೧೦೦೦
ಬೆಲೆ : ಮೂವತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

ಪ್ರಕಟಣಾ ಸಮಿತಿ

ಅಧ್ಯಕ್ಷರು
ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)

ಸಂಚಾಲಕರು
ಶ್ರೀ ಜರಗನಹಳ್ಳಿ ಶಿವಶಂಕರ್

ಸದಸ್ಯರು
ಶ್ರೀ ಪುಂಡಲೀಕ ಹಾಲಂಬಿ
ಡಾ. ಎಚ್.ಜಯಮ್ಮ ಕರಿಯಣ್ಣ
ಶ್ರೀ ವಿಶ್ವನಾಥ ವಂಶಾಕೃತಮಠ
ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ
ಶ್ರೀ ವಿಷ್ಣು ನಾಯ್ಕ
ಪ್ರೊ. ಎಲ್.ಎಸ್. ಶೇಷಗಿರಿರಾವ್

ಸಮ್ಮೇಳನಾಧ್ಯಕ್ಷರು
೭೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಂಸ್ಕೃತಿ, ನಾಡು ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಸಂಸ್ಥೆ. ೯೨ ವರ್ಷಗಳ ದೀರ್ಘಕಾಲದ ಇತಿಹಾಸ ಹೊಂದಿರುವ ಪರಿಷತ್ತಿಗೆ ಉತ್ತಮ ಹಾಗೂ ಮೌಲಿಕವಾದ ಸಾಹಿತ್ಯ ಕೃತಿಗಳನ್ನು ಮುದ್ರಣ ಮಾಡುವುದು ಪ್ರಧಾನ ಆಶಯವಾಗಿದೆ. ಈ ಹಿಂದಿನ ಹಲವು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ಕ್ಕೂ ಹೆಚ್ಚು ಕೃತಿಗಳನ್ನು ಪರಿಷತ್ತು ಈವರೆಗೆ ಹೊರತಂದಿದೆ.

ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ, ಅಕ್ಷರಜ್ಞಾನವನ್ನುಂಟುಮಾಡುವ ಘನ ಉದ್ದೇಶದಿಂದ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದ ಹಲವು ಗ್ರಂಥಗಳನ್ನು ಪರಿಷತ್ತು ಪ್ರಕಟಿಸಿದೆ. ಇವುಗಳಲ್ಲಿ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳ ಗದ್ಯಾನುವಾದಗಳು, ಕನ್ನಡ ಭಾಷೆ, ಲಿಪಿ, ಸಂಸ್ಕೃತಿ ಬಗೆಗಿನ ಗ್ರಂಥಗಳು, ಕವಿ-ಕಾವ್ಯ ವಿಚಾರ ಸಂಕಿರಣಗಳ ಪ್ರಬಂಧಗಳು, ಜೀವನ ಚರಿತ್ರೆ, ಜಾನಪದ, ಶಾಸನ, ಆರೋಗ್ಯ, ವಿಜ್ಞಾನ, ಮಕ್ಕಳ ಸಾಹಿತ್ಯ- ಹೀಗೆ ವೈವಿಧ್ಯಮಯ ಪ್ರಕಾರಗಳ ಪುಸ್ತಕಗಳು ಸೇರಿವೆ.

'ವಿದುರ ನೀತಿ' ಗ್ರಂಥವು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರು ಮುದ್ರಣವಾಗಿರುವುದು ಹೆಮ್ಮೆಯ ಸಂಗತಿ. ಈ ಗ್ರಂಥವನ್ನು ಕನ್ನಡದ ಜನತೆ ಅತ್ಯಂತ ಆದರದಿಂದ ಸ್ವೀಕರಿಸುತ್ತಾರೆ ಎಂದು ನಿರೀಕ್ಷಿಸಿದ್ದೇನೆ.

ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿ ಹೊರತಂದಿರುವ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿವರ್ಗಕ್ಕೆ ಹಾಗೂ ಈ ಕಾರ್ಯದಲ್ಲಿ ಸಹಕಾರ ನೀಡಿದ ಎಲ್ಲರಿಗೂ ನನ್ನ ಕೃತಜ್ಞತೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಪ್ರಸ್ತಾವನೆ

(ಪ್ರಥಮ ಮುದ್ರಣ)

ಕನ್ನಡ ನಾಡು ನುಡಿ ಸಂಸ್ಕೃತಿಯ ಪುರೋಭಿವೃದ್ಧಿಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಾಭಿಮಾನಿಗಳ ಸಲಹೆ ಸಹಕಾರ ಪಡೆದು ತ್ರೈವಾರ್ಷಿಕ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯಲ್ಲಿ ಅಡಕವಾಗಿರುವ ಅಂಶಗಳನ್ನು ೧೯೭೦ನೆಯ ಜನವರಿಯಿಂದ ಮೂರು ವರ್ಷಗಳ ಕಾಲಾವಧಿಯಲ್ಲಿ ಕಾರ್ಯಗತ ಮಾಡಬೇಕಾಗಿದ್ದು ಈ ಯೋಜನೆಗೆ ತಗಲುವ ವೆಚ್ಚವು ಇಪ್ಪತ್ತು ಲಕ್ಷ ರೂಪಾಯಿಗಳೆಂದು ಅಂದಾಜಾಗಿದೆ. ಈ ಮೊತ್ತದ ಮೂರನೆಯ ಒಂದು ಭಾಗದಷ್ಟು ಹಣವನ್ನು ಪುಸ್ತಕಗಳ ಪ್ರಕಟಣೆಗಾಗಿ ಯೋಜನೆಯಲ್ಲಿ ಮೀಸಲಾಗಿರಿಸಿದೆ.

ಪರಿಷತ್ತು ಪ್ರಾರಂಭವಾದ ತರುವಾಯ ಕನ್ನಡದಲ್ಲಿ ಅನೇಕ ವಿದ್ವತ್ಪೂರ್ಣ ಗ್ರಂಥಗಳನ್ನು ಪ್ರಕಟಿಸಿದ್ದು ಅವು ಓದುಗರ ಮನ್ನಣೆಗೆ ಪಾತ್ರವಾಗಿವೆಯಷ್ಟೆ. ಇದರ ಜೊತೆಗೆ ಪರಿಷತ್ತಿನ ತ್ರೈವಾರ್ಷಿಕ ಯೋಜನೆಯ ಅವಧಿಯಲ್ಲಿ ಒಂದೂ ನೂರು ಪುಸ್ತಕಗಳನ್ನಾದರೂ ಹೊರತರಬೇಕೆಂದು ನಿಯೋಜಿಸಲಾಗಿದೆ. ಪುನರ್ಮುದ್ರಣವಾಗಬೇಕಾದ ಕೆಲವು ಪ್ರಾಚೀನ ಗ್ರಂಥಗಳನ್ನು ಪ್ರಕಟಿಸುವುದಲ್ಲದೆ ಶಾಸ್ತ್ರ, ಸಾಹಿತ್ಯ, ಕಲೆ, ವಿಜ್ಞಾನ ಮೊದಲಾದ ನಾನಾ ವಿಷಯಗಳನ್ನು ಕುರಿತ ಗ್ರಂಥಗಳನ್ನೂ ಭಾಷಾಂತರ ಕೃತಿಗಳನ್ನೂ ಜೊತೆಗೆ ವಿದ್ಯಾರ್ಥಿಗಳಿಗೂ ಜನಸಾಮಾನ್ಯರಿಗೂ ಹೆಚ್ಚು ಪ್ರಯೋಜನವಾಗುವಂತೆ ಒಂದು ಸಂಕ್ಷಿಪ್ತ ಶಬ್ದಕೋಶವನ್ನೂ ಆದಷ್ಟು ಜಾಗ್ರತೆ ಪ್ರಕಟಿಸಬೇಕೆಂದು ತೀರ್ಮಾನಿಸಿದೆ.

ಓದುಗರ ದೃಷ್ಟಿಯಿಂದ ಪುಸ್ತಕದ ಬೆಲೆ ದುಬಾರಿಯಾಗದಂತೆ ನೋಡಿಕೊಳ್ಳುವುದು, ಕೆಲವು ಪುಸ್ತಕಗಳನ್ನು ಸಹಾಯಧನ ಪಡೆದು ಕಡಮೆ ಬೆಲೆಗೆ ಮಾರಾಟ ಮಾಡುವುದು ಇವು ಪರಿಷತ್ತಿನ ಆಶಯಗಳಾಗಿವೆ.

ಪ್ರಕಟಣೆಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಪ್ರಕಟಣೆಯ ಕಾರ್ಯವನ್ನು ಕಾರ್ಯಗತ ಮಾಡಲು ಗ್ರಂಥಪ್ರಕಟಣ ಸಲಹಾ ಸಮಿತಿಯೊಂದನ್ನು ರಚಿಸಿದ್ದು ಆ ಸಮಿತಿಯಲ್ಲಿ ಡಾ|| ಹಾ. ಮಾ. ನಾಯಕ, ಡಾ|| ಜಿ. ಎಸ್. ಶಿವರುದ್ರಪ್ಪ ಡಾ|| ಆರ್. ಸಿ. ಹಿರೇಮಠ, ಪ್ರೊ. ಎಂ. ಮರಿಯಪ್ಪ ಭಟ್ಟ, ಶ್ರೀ ಹೆಚ್. ಎಲ್. ನಾಗೇಗೌಡ ಮತ್ತು ಶ್ರೀ ಸಿದ್ಧಯ್ಯ ಪುರಾಣಿಕ ಇವರುಗಳು ಸದಸ್ಯರಾಗಿದ್ದಾರೆ. ಡಾ|| ರಂ. ಶ್ರೀ ಮುಗಳಿಯವರು ಪ್ರಧಾನ ಸಂಪಾದಕತ್ವದ ಹೊಣೆ ಹೊತ್ತಿದ್ದಾರೆ. ಮತ್ತು ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ ಸಾಂಗ್ಲಿ ಶ್ರೀ ಹಂಪ ನಾಗರಾಜಯ್ಯ ಅವರುಗಳು ಈ ಸಮಿತಿಯ ಕಾರ್ಯದರ್ಶಿಗಳಾಗಿದ್ದಾರೆ. ಇವರೆಲ್ಲರಿಗೂ ಪರಿಷತ್ತು ಆಭಾರಿಯಾಗಿದೆ.

ಈ ಸಮಿತಿಯ ಸಹಕಾರದಿಂದ ಪ್ರಕಟವಾಗುವ ಪರಿಷತ್ತಿನ ಪ್ರಕಟಣೆಗಳನ್ನು ಕನ್ನಡಾಭಿಮಾನಿಗಳು ಆದರದಿಂದ ಬರಮಾಡಿಕೊಂಡು ಆಸ್ಥೆಯಿಂದ ಓದಬೇಕಾಗಿ ಪ್ರಾರ್ಥನೆ.

ಬೆಂಗಳೂರು
೧೦-೨-೧೯೭೨

ದೇಶಹಳ್ಳಿ ಜಿ. ನಾರಾಯಣ
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಮುನ್ನುಡಿ

(ಪ್ರಥಮ ಮುದ್ರಣ)

ಕುಮಾರವ್ಯಾಸಭಾರತದಲ್ಲಿ ಬರುವ 'ವಿದುರ ನೀತಿ'ಯ, ಭಾಗವನ್ನು ಇಲ್ಲಿ ಸರಳ ಅನುವಾದದೊಡನೆ ಪ್ರಕಟಿಸಿದೆ. ಈ ಭಾಗವನ್ನು ಮೈಸೂರು ಸರ್ಕಾರ ಪ್ರಕಟಿಸಿದ 'ಕುಮಾರವ್ಯಾಸಭಾರತ' ದಿಂದ ತೆಗೆದುಕೊಂಡಿದೆ.

ಪರಿಷತ್ತಿನ ಪ್ರಾರ್ಥನೆಯನ್ನು ಮನ್ನಿಸಿ ಪಂಡಿತ ಶ್ರೀ ಎನ್. ರಂಗನಾಥಶರ್ಮ ಅವರು ಪದ್ಯಗಳ ಸರಳ ಅನುವಾದವನ್ನು ಮಾಡಿಕೊಟ್ಟಿದ್ದಾರೆ. ಅವರಿಗೆ ಪರಿಷತ್ತಿ ಪರವಾಗಿ ನನ್ನ ಹಾರ್ದಿಕ ವಂದನೆಗಳನ್ನು ಸಲ್ಲಿಸುತ್ತೇನೆ.

ರಂ. ಶ್ರೀ ಮುಗಳಿ
ಪ್ರಧಾನ ಸಂಪಾದಕರು
ಗ್ರಂಥ ಪ್ರಕಟಣಾ ಸಲಹಾ ಸಮಿತಿ

ಕುಮಾರವ್ಯಾಸನ

ಕರ್ಣಾಟ ಭಾರತ ಕಥಾಮಂಜರಿ

ವಿದುರ ನೀತಿ

ಶ್ರೀವನಿತೆಯರಸನೆ ವಿಮಲ ರಾ
ಜೀವ ಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನನಿಕರ ದಾತಾರ
ರಾವಣಾಸುರಮಥನ ಶ್ರವಣ ಸು
ಧಾ ವಿನೂತನ ಕಥನ ಕಾರಣ
ಕಾವುದಾನತ ಜನವ ಗದುಗಿನ ವೀರನಾರಯಣ

ವಿದುರ ನೀತಿ

ಬಂದನಾ ಧೃತರಾಷ್ಟ್ರರಾಯನ
ಮಂದಿರಕೆ ಕಂಡನು ಮಹೀಶನ
ನೊಂದೆರಡು ಮಾತಿನಲಿ ಸೂಚಿಸಿ ಮರಳಿದನು ಮನೆಗೆ
ಅಂದಿನಿರುಳೊಳು ನಿದ್ರೆ ಬಾರದೆ
ನೊಂದು ವಿದುರನ ಕರೆದು ರಾಯನ
ತಂದೆ ಬಿಸುಸುಯ್ಯುತ್ತ ನುಡಿದನು ವಿದುರದೇವಂಗೆ ೧

ನಾಳೆ ಸಭೆಯಲಿ ಬಂದ ಹದನನು
ಹೇಳುವನು ಸಂಜಯನು ಸಂಧಿಯೊ
ಕಾಳಗವೊ ಮುಂದುರಿಯಬಾರದು ದುಗುಡವಾಯ್ತೆನಗೆ
ಹೇಳು ನಿರುತವನಿಂದಿನಿರುಳನು
ಬೀಳುಕೊಟ್ಟುದು ನಿದ್ರೆಯೆನೆ ಭೂ
ಪಾಲಕನ ಸಂತೈಸಿ ಮಂತ್ರಿಂತೆಂದನಾ ವಿದುರ ೨

ಬಲವಿಹೀನನು ಬಲ್ಲಿದನ ಕೂ
ಡೊಲಿದು ತೊಡಕಿದವಂಗೆ ಕಾಮದ
ಕಳವಳದಲಿರ್ದಂಗೆ ಧನದಳಲಿಂದ ಮರುಗುವಗೆ
ಕಳವಿನಲಿ ಕುದಿವಂಗೆ ದೈವದ
ನೆಲೆಯನರಿಯದವಂಗೆ ದಿಟವಿದು
ತಿಳಿಯೆ ಬಾರದು ನಿದ್ರೆಯೆಂದನು ಭೂಪತಿಗೆ ವಿದುರ ೩

ಒಂದರಿಂದೆರಡಹುದನರಿ ಮೂ
ರಂದವನು ತಿಳಿ ನಾಲ್ಕರಲಿ ಮನ
ಗುಂದದಿರದೈದರಲಿ ವರ್ಜಿಪುದಾರನೇಳರಲಿ
ಒಂದಿಸದಿರೆಂಟನು ವಿಚಾರಿಸಿ
ಮುಂದುವರಿವೊಂಬತ್ತರಲಿ ಮನ
ಗುಂದಿಸದಿರೀರೈದರಲಿ ಭೂಪಾಲ ಕೇಳೆಂದ ೪

ತಾತ್ಪರ್ಯ

೧. ಸಂಜಯನು ಧೃತರಾಷ್ಟ್ರನ ಅರಮನೆಗೆ ಬಂದು, ಪಾಂಡವರೊಡನೆ ತಾನು ನಡೆಸಿದ ಸಂಭಾಷಣೆಯ ವಿಷಯವಾಗಿ ಒಂದೆರಡು ಮಾತುಗಳನ್ನು ಸಂಕ್ಷೇಪವಾಗಿ ತಿಳಿಸಿ ತನ್ನ ಮನೆಗೆ ಹೋದನು. ಆ ರಾತ್ರಿ ಧೃತರಾಷ್ಟ್ರನಿಗೆ ನಿದ್ರೆಯೇ ಬರಲಿಲ್ಲ. ಅವನು ವಿದುರನನ್ನು ಕರೆಸಿ ನಿಟ್ಟುಸಿರು ಬಿಡುತ್ತ ಹೀಗೆ ಹೇಳಿದನು:

೨. "ವಿದುರ, ಸಂಜಯನು ಪಾಂಡವರೊಡನೆ ನಡೆಸಿದ ಮಾತುಕತೆಗಳ ವಿವರವನ್ನು ನಾಳೆ ರಾಜಸಭೆಯಲ್ಲಿ ತಿಳಿಸುವನು. ನಮಗೆ ಅವರೊಡನೆ ಸಂಧಿಯಾಗುವುದೋ ಅಥವಾ ಯುದ್ಧವೇ ಒದಗಿಬರುವುದೋ ತಿಳಿಯದು. ನಾವು ದುಡುಕಿ ಮುಂದರಿಯಬಾರದು. ನನಗಂತೂ ಬಹಳ ಕಳವಳವಾಗಿದೆ. ವಿದುರ, ಹಿತಕರವಾದ ಮಾರ್ಗವು ಯಾವುದೆಂಬುದನ್ನು ಹೇಳು. ನನಗೆ ನಿದ್ರೆಯೇ ಬಾರದು." ಆಗ ವಿದುರನು ಧೃತರಾಷ್ಟ್ರನನ್ನು ಸಂತೈಸುತ್ತ ಈ ಪ್ರಕಾರವಾಗಿ ನುಡಿದನು:

೩. ಮಹಾರಾಜ, ಬಲಶಾಲಿಯ ಆಕ್ರಮಣಕ್ಕೆ ಸಿಕ್ಕಿದ ದುರ್ಬಲನಿಗೂ ಕಾಮಾತುರನಿಗೂ ಹಣದ ಚಿಂತೆಯಿಂದ ಕಂಗೆಟ್ಟವನಿಗೂ ಕಳ್ಳನಿಗೂ ದೈವದ ಮಹಿಮೆ ಎಷ್ಟೆಂಬುದನ್ನರಿಯದೆ ತೊಳಲುವವನಿಗೂ ಮನಶ್ಶಾಂತಿ ಇರುವುದಿಲ್ಲ. ದಿಟವಾಗಿಯೂ ಅಂಥವರಿಗೆ ನಿದ್ರೆಯೇ ಬಾರದು!

೪. ಧೃತರಾಷ್ಟ್ರ, ಒಂದೇ ಅದ್ವಿತೀಯ ವಸ್ತುವಿನಿಂದ ದ್ವಂದ್ವವಾಗಿ ತೋರುವ ಈ ಜಗತ್ತು ಹುಟ್ಟಿತೆಂದು ತಿಳಿ. ಮೂರು ಗುಣಗಳ ಸ್ವರೂಪವನ್ನರಿತು ನಾಲ್ಕು ಪುರುಷಾರ್ಥಗಳಲ್ಲಿ ನಿಷ್ಠೆಯಿಂದಿರು. ಪಂಚೇಂದ್ರಿಯಗಳಲ್ಲಿ ಆಸಕ್ತನಾಗದೆ ಅರಿಷಡ್ವರ್ಗಗಳನ್ನು * ಗೆದ್ದು ಸಪ್ತವ್ಯಸನಗಳನ್ನು ತ್ಯಜಿಸು. ಯೋಗದ ಅಷ್ಟಾಂಗಗಳನ್ನು ಶ್ರದ್ಧೆಯಿಂದ ವಿಚಾರಿಸಿ ಭಕ್ತಿಮಾರ್ಗದಲ್ಲಿ ಮುಂದುವರಿ. ಹತ್ತು ಬಗೆಯ ಸಾಮಾನ್ಯ ಧರ್ಮಗಳನ್ನು ಉಪೇಕ್ಷಿಸಬೇಡ.

ಟಿಪ್ಪಣಿ · ಅರಿಷಡ್ವರ್ಗ = ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ. ಸಪ್ತವ್ಯಸನಗಳು = ಮದ್ಯಪಾನ, ಜೂಜು, ಸ್ತ್ರೀ, ಬೇಟೆ, ಕ್ರೂರವಾದ ದಂಡನೆ, ಕಠೋರ ವಚನ, ದುಂದುಗಾರಿಕೆ, ಯೋಗದ ಅಷ್ಟಾಂಗ = ಯಮ, ನಿಯಮ, ಅಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣಾ, ಸಮಾಧಿ. ಒಂಬತ್ತು ಬಗೆಯ ಭಕ್ತಿಮಾರ್ಗ = ಶ್ರವಣ, ಸ್ಮರಣ, ಕೀರ್ತನ, ವಂದನ, ಅರ್ಚನ, ಪಾದಸೇವನ, ಸಖ್ಯ, ದಾಸ್ಯ, ಆತ್ಮನಿವೇದನ. ಸಾಮಾನ್ಯ ಧರ್ಮಗಳು = ಸಂತೋಷ, ತಾಳ್ಮೆ, ಮನೋನಿಗ್ರಹ, ಪರದ್ರವ್ಯದಲ್ಲಿ ಅನಪೇಕ್ಷೆ, ಶುಚಿತ್ವ, ಇಂದ್ರಿಯನಿಗ್ರ, ಶಾಸ್ತ್ರವಿಚಾರ, ಆತ್ಮಜ್ಞಾನ, ಸತ್ಯ, ಕೋಪಿಸಿಕೊಳ್ಳದಿರುವುದು (ಮನು, ೬-೯೨).

ತನ್ನ ಚಿಂತೆಯದೊಂದು ದೈವದ
ಗನ್ನಗತಕವದೆರಡು ಭಾವದ
ಬನ್ನಣೆಯ ಬಗೆ ಮೂರು ದೈವದ ಭಿನ್ನಮುಖ ನಾಲ್ಕು
ತನ್ನ ನೆನಹಿನವೋಲು ಕಾರ್ಯವು
ಚೆನ್ನಹಡೆ ಲೋಕಕ್ಕೆ ತಾ ಬೇ
ರಿನ್ನು ದೈವವದೇಕೆ ತಾನೇ ದೈವರೂಪೆಂದು ೫

ಒಂದು ವರ್ಣವನರುಹಿದವ ಗುರು
ವೊಂದಪಾಯದಲುಳಿಹಿದವ ಗುರು
ಬಂದ ವಿಗ್ರಹದೊಳಗೆ ರಕ್ಷಿಸಿದಾತ ಪರಮಗುರು
ಒಂದೆರಡು ಮೂರೈಸಲೇ ತಾ
ನೆಂದು ಗರ್ವೀಕರಿಸಿದವರುಗ
ಳೊಂದುವರು ಚಾಂಡಾಲ ಯೋನಿಯೊಳರಸ ಕೇಳೆಂದ ೬

ತನ್ನ ಕಾರಿಯ ಕಾರಣವನುಳಿ
ದನ್ಯಥಾ ಚಿಂತೆಯನು ಮಾಡುವು
ದುನ್ನತಿಗೆ ತಾನಲ್ಲ ನೀತಿಜ್ಞರಿಗೆ ಭಾವಿಸಲು
ಮನ್ನಿಸುವುದಾತ್ಮನನು ಮಿಕ್ಕುದ
ನನ್ಯರಿಗೆ ಮಾಡುವುದದಲ್ಲದೆ
ತನ್ನತಾ ಮರೆದಿಹುದು ಮತವೆಲ್ಲಂದನಾ ವಿದುರ ೭

ಹಾವು ಹಲವನು ಹಡೆದು ಲೋಕಕೆ
ಸಾವ ತಹವೊಲು ನೂರು ಮಕ್ಕಳ
ನಾವ ಪರಿಯಲಿ ಹಡೆದು ಕೆಡಿಸಿದೆ ಭೂಮಿ ಭಾರಕರ
ಭಾವಿಸಲು ಸರ್ವಜ್ಞ ಸರ್ವಗು
ಣಾವಲಂಬನನೊಬ್ಬನರ್ಜುನ
ದೇವ ಸಾಲದೆ ನಾಡನಾಯಿಗಳೇನು ಫಲವೆಂದ ೮

ದೀಪ ದೀಪವ ತೊಳಲಿ ಕರ್ಮ ಕ
ಳಾಪದಲಿ ಕುದಿಕುದಿದು ನಾನಾ
ರೂಪಿನಿಂದಾರ್ಜಿಸುವ ಧರ್ಮದ ಗೊಡವೆ ತಾನೇಕೆ
ಭೂಪ ಕೇಳೈ ಸತ್ಯವೊಂದೇ
ಸೋಪನವು ಸಗ್ಗಕ್ಕೆ ಜನ್ಮದ
ಕೂಪರಕ್ಕಿದು ನಾವೆಯಾಗಿಹುದೆಂದನಾ ವಿದುರ ೯

೫. ಮನುಷ್ಯನು ಒಂದನ್ನು ಆಲೋಚಿಸಿದರೆ ದೈವವು ಎರಡನ್ನು ಬಗೆದು ಕೈಗೊಡುತ್ತದೆ. ಇವನು ಗುರಿಯನ್ನು ಸಾಧಿಸಲು ಮೂರು ದಾರಿಗಳನ್ನು ಹುಡುಕಿದರೆ ದೈವವು ನಾಲ್ಕು ವಿಧಗಳಿಂದ ಅದನ್ನು ಕೆಡಿಸುತ್ತದೆ! ತನ್ನ ಇಚ್ಛೆಯಂತೆ ಎಲ್ಲವೂ ನಡೆಯುವುದಾದರೆ, ಮಹಾರಾಜ, ದೇವರು ಎಂಬವನನ್ನು ಏಕೆ ಒಪ್ಪಬೇಕು? ಲೋಕಕ್ಕೆ ನಾನೇ ದೇವರು ಎಂದು ಮನುಷ್ಯನು ಹೇಳಿಕೊಂಡಾನು!

೬. ಒಂದು ಅಕ್ಷರವನ್ನು ಹೇಳಿಕೊಟ್ಟಿದ್ದರೂ ~~, ಅವನನ್ನು ಗುರುವೆಂದು ಭಾವಿಸಬೇಕು. ಆಪತ್ಕಾಲದಲ್ಲಿ ತನ್ನನ್ನು ಉಳಿಸಿದವನೂ ಗುರುವೇ. ಯುದ್ಧಕಾಲದಲ್ಲಿ ರಕ್ಷಿಸಿದವನು ಪರಮಗುರುವೆಂದು ತಿಳಿಯಬೇಕು. ಅವರಿಂದಾದ ಉಪಕಾರವು ಅತ್ಯಲ್ಪವೆಂದು ಉಪೇಕ್ಷಿಸಿ, ನಾನೇ ಹೆಚ್ಚೆಂದು ಗರ್ವ ಪಡತಕ್ಕವನು ಮುಂದೆ ನೀಚ ಜನ್ಮದಲ್ಲಿ ಹುಟ್ಟಬೇಕಾಗುತ್ತದೆ.

೭. "ನನ್ನ ಕರ್ತವ್ಯ ಯಾವುದು? ಯಾವುದರಿಂದನನಗೆ ಶ್ರೇಯಸ್ಸು?" ಎಂಬುದನ್ನು ವಿಚಾರ ಮಾಡ ಕಾರ್ಯದಲ್ಲಿ ತೊಡಗಬೇಕು. ಹಾಗಲ್ಲದೆ ವ್ಯರ್ಥವಾದ ಹವ್ಯಾಸದಲ್ಲಿ ತೊಡಗುವುದು ದೊಡ್ಡತನವಲ್ಲ; ನೀತಿಯಲ್ಲ. ನಮ್ಮ 'ಆತ್ಮವಸ್ತು'ವಿನ ಉನ್ನತಿಯನ್ನು ಸಾಧಿಸುತ್ತ, ಉಳಿದ ಸಮಯವನ್ನು ಪರೋಪಕಾರಕ್ಕಾಗಿ ವಿನಿಯೋಗಿಸಬೇಕು. ಅದಲ್ಲದೆ ತನ್ನ ಆತ್ಮವನ್ನೇ ಮರೆತು ನಡೆಯುವುದು ಸರಿಯಲ್ಲ.

೮. ಧೃತರಾಷ್ಟ್ರ, ಹಾವು ಹಲವು ಮರಿಗಳನ್ನು ಹಡೆದು ಜನರ ಸಾವಿಗೆ ಕಾರಣವಾಗುತ್ತದೆ. ಅದರಂತೆ ನೀನು ಭೂಭಾರಕರಾದ ನೂರು ಮಕ್ಕಳನ್ನು ಹಡೆದು ಜನರಿಗೆ ಕಷ್ಟವನ್ನು ತಂದೊಡ್ಡಿದೆ! ವಿಚಾರ ಮಾಡಿದರೆ ವಿವೇಕಿಯೂ ಗುಣಸಂಪನ್ನನೂ ಆದ ಅರ್ಜನನಂತಹ ಒಬ್ಬ ಮಗನಿದ್ದರೆ ಸಾಲದೆ? ಕೆಲಸಕ್ಕೆ ಬಾರದ ಬೀದಿ ನಾಯಿಗಳಿಂದ ಏನು ಫಲ?

೯. ದೀಪವನ್ನು ಹಿಡಿದು ಹುಡುಕುತ್ತ ಅತ್ತಿಂದಿತ್ತ ಪರದಾಡುವಂತೆ, ಯಾವುದನ್ನು ಮಾಡಿ ಪುಣ್ಯವನ್ನು ಸಂಪಾದಿಸಿಯೇನು–ಎಂದು ತೊಳಲುವುದಾದರೂ ಏಕೆ? ರಾಜ, ಕೇಳು: ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ. ಅದೊಂದೇ ಸ್ವರ್ಗಕ್ಕೆ ಮೆಟ್ಟಿಲು ಎಂದು ತಿಳಿ. ಸತ್ಯವೇ ಸಂಸಾರವೆಂಬ ಸಮುದ್ರವನ್ನು ದಾಟಿಸುವ ಹರಿಗೋಲು.

ಪಾಪದಿಂದಾರ್ಜಿಸಿದೊಡರ್ಥವ
ನಾ ಫಲವನುಂಬವರಿಗಿಲ್ಲಾ
ಪಾಪವೊಬ್ಬಂಗಪ್ಪುದಾರ್ಜಿಸಿದುರಗನಂದದಲಿ
ಕಾಪಥವನಾಶ್ರಯಿಸಿ ಕೋಪಾ
ಟೋಪದಿಂದುತ್ತಮರ ಸರ್ವ
ಸ್ವಾಪಹಾರವ ಮಾಡಿ ಬದುಕುವುದಾವ ಗುಣವೆಂದ ೧೦

ಬವರ ಮುಖದಲಿ ವೈರಿರಾಯರ
ನವಗಡಿಸಿ ತಂದಾ ಧನವ ಭೂ
ದಿವಿಜ ಸಂತತಿಗಿತ್ತ ಫಲವಿನಿತೆಂದು ಗಣಿಸುವಡೆ
ದಿವಿಜಪತಿಗಾಗದು ಕಣಾ ಮಾ
ನವಪತಿಗೆ ಸದ್ಧರ್ಮವಿದು ನಿ
ನ್ನವನು ನೀತಿಯನರಿಯನೈ ಧೃತರಾಷ್ಟ್ರ ಕೇಳೆಂದ ೧೧

ಧರಣಿಯಮರರ ಧನದಿ ಸಲಹಿದ
ಕರಿತುರಗ ಮೊದಲಾದ ದಳವು
ಬ್ಬರದಿ ಹೆಚ್ಚಿಹುದರಿನೃಪಾಲರ ಯುದ್ಧಪರಿಯಂತ
ಜರಿದು ನಸಿವುದು ವಾಹಿನಿಗೆ ಮಲೆ
ತುರು ಮಳಲ ಕಟ್ಟೆಯವೊಲಿದನರಿ
ದರಸುಗಳು ವರ್ಣೋತ್ತಮರ ದೆಸೆಗಂಜಬೇಕೆಂದ ೧೨

ಉರಗನೌಡಿದೊಡದರ ವಕ್ತ್ರದೊ
ಳಿರದೆ ಮೇಣಾ ದಷ್ಟ ದೇಹದೊ
ಳಿರದೆ ರುಧಿರವು ಪೋಪವೊಲು ದುಷ್ಟಾಧಿಕಾರಿಗಳ
ಒರಸೊರಸಿನಿಂ ಜನಪದದ ಧನ
ಹರಿವುದರಸಂಗಲಸಿದಾ ಪ್ರಜೆ
ಗಿರದುಭಯ ಪಿಂಗುವುದನರಿ ಭೂಪಾಲ ಕೇಳೆಂದ ೧೩

ಉರಗನಗಿದೊಡೆ ಮೇಣು ಶಸ್ತ್ರದ
ಲಿರಿದಡೊಬ್ಬನೆ ಸಾವನದರಿಂ
ದರಸು ನೆಗಳಿದ ಮಂತ್ರ ಭೇದಿಸಲರಿನೃಪಾಲಕರ
ಧರೆ ಸಹಿತ ತತ್ಸಕಲ ಬಲ ಸಂ
ಹರಣವಹುದಿದನರಿದು ಭೂಪೋ
ತ್ತರ ರಹಸ್ಯದ ಮಂತ್ರವುಂಟೇ ರಾಯ ನಿನಗೆಂದ ೧೪

೧೦. ಅಧರ್ಮದಿಂದ ಹಣವನ್ನು ಸಂಪಾದಿಸಿದಾಗ, ಕರ್ತನಿಗೆ ಮಾತ್ರವೇ ಪಾಪವು ಗಂಟು ಬೀಳುತ್ತದೆ. ಆ ಹಣವನ್ನು ಅನುಭವಿಸುವ ಇತರರು ಪಾಪವನ್ನು ಹಂಚಿಕೊಳ್ಳುವುದಿಲ್ಲ. ಪಾಪವು ಸರ್ಪವಿದ್ದಂತೆ. ಸರ್ಪವು ಯಾರನ್ನು ಕಚ್ಚುವುದೋ ಅವರಿಗೆ ಮಾತ್ರ ವಿಷದ ಬಾಧೆ. ಅವರ ಬಂಧುಗಳಿಗೆ ವಿಷವು ಅಂಟುವುದಿಲ್ಲ! ದುರ್ಮಾರ್ಗಕ್ಕಿಳಿದು ಕೋಪಾಟೋಪದಿಂದ ಉತ್ತಮರ ಧನವನ್ನು ದೋಚಬಾರದು.

೧೧. ಯುದ್ಧದಲ್ಲಿ ವೈರಿಗಳನ್ನು ಗೆದ್ದು ಸಂಪಾದಿಸಿದ ಐಶ್ವರ್ಯವನ್ನು ಅರ್ಹರಾದ ಉತ್ತಮರಿಗೆ ದಾನಮಾಡಬೇಕು. ಅದರಿಂದಾಗುವ ಫಲ ಅಷ್ಟಿಷ್ಟಲ್ಲ. ಅದನ್ನು ಗೊತ್ತುಪಡಿಸಲು ದೇವೇಂದ್ರನಿಗೂ ಸಾಧ್ಯವಿಲ್ಲ. ದಾನ ಮಾಡುವುದು ರಾಜಧರ್ಮ. ಧೃತರಾಷ್ಟ್ರ, ನಿನ್ನ ಮಗನಿಗೆ ಈ ನೀತಿ ರಹಸ್ಯವು ತಿಳಿಯದು.

೧೨. ಬ್ರಾಹ್ಮಣರ ಹಣವನ್ನು ಸುಲಿದು ಆನೆ, ಕುದುರೆ ಮುಂತಾದ ಸೈನಿಕ ದಳವನ್ನು ಹೆಚ್ಚಿಸಿದರೆ ಅದು ಬಹುಕಾಲ ನಿಲ್ಲದು. ವೈರಿಗಳೊಡನೆ ಯುದ್ಧವು ಒದಗಿದಾಗ ಅಂತಹ ಸೇನೆಯು, ನದಿಗೆ ಹಾಕಿದ ಮರಳಿನ ಅಡ್ಡಗೋಡೆಯಂತೆ ಜರಿದು ನಾಶವಾಗುವುದು. ಇದನ್ನು ರಾಜರು ತಿಳಿದು ಉತ್ತಮರಿಗೆ ಅಂಜಿ ನಡೆಯಬೇಕು.

೧೩. ಹಾವು ಕಚ್ಚಿದರೆ ಮನುಷ್ಯನ ರಕ್ತವು ಹಾವಿಗೂ ದಕ್ಕುವುದಿಲ್ಲ. ಇತ್ತ ಮನುಷ್ಯನ ದೇಹದಲ್ಲಿಯೂ ರಕ್ತವು ಉಳಿಯುವುದಿಲ್ಲ! ಅದರಂತೆ ದುಷ್ಟರಾದ ಅಧಿಕಾರಿಗಳ ಮೂಲಕ ಪ್ರಜೆಗಳನ್ನು ನೋಯಿಸಿ ತಂದ ಐಶ್ವರ್ಯವು ರಾಜನಿಗೂ ದಕ್ಕದು; ಪ್ರಜೆಗಳಲ್ಲಿಯೂ ಉಳಿಯದು! ಅದು ರಾಷ್ಟ್ರದಿಂದ ಹೊರಗೆ ಹರಿದು ಹೋಗುವುದು. ಇದನ್ನು ಚೆನ್ನಾಗಿ ಮನಸ್ಸಿಗೆ ತಂದುಕೊಳ್ಳಬೇಕು.

೧೪. ಸರ್ಪವು ಕಚ್ಚಿದರೂ ಆಯುಧದಿಂದ ಹೊಡೆದರೂ ಒಬ್ಬನೇ ಸಾಯುತ್ತಾನೆ. ಆದರೆ ರಾಜನೀತಿಯನ್ನನುಸರಿಸಿ ಸರಿಯಾದ ಮಂತ್ರಾಲೋಚನೆಯನ್ನು ಪ್ರಯೋಗಿಸಿದಾಗ, ಶತ್ರುಗಳೆಲ್ಲರೂ ಸೇನಾಸಮೇತರಾಗಿ ನಾಶಹೊಂದುತ್ತಾರೆ. ಅವರ ರಾಜ್ಯವೂ ವಶವಾಗುತ್ತದೆ. ಧೃತರಾಷ್ಟ್ರ, ವಿವೇಚನಾಪೂರ್ಣವಾದ ಮಂತ್ರಾಲೋಚನೆಗೆ ಸಮವಾದ ಮಂತ್ರ ಇನ್ನೊಂದಿಲ್ಲ.

ಏಸು ಧರ್ಮದಲಾರ್ಜಿಸಿದ ಧನ
ವೈಸು ಸಿರಿ ವರ್ಧಿಸುವುದದರಿಂ
ದೇಶಮಂಗಳ ಪುತ್ರ ಮಿತ್ರ ಕಳತ್ರವರಿವಿಜಯ
ಪೈಸರಿಸುವುದು ಬಂದ ಬಳಿವಿಡಿ
ದಾಸುರದ ಪಥವಿದನರಿದು ಭೂ
ಮಿಾಶ ಧರ್ಮವ ಹಿಡಿಯಧರ್ಮವ ಬಿಟ್ಟು ಕಳೆಯೆಂದ ೧೫

ಹರಿವ ನದಿ ತನ್ನಿಚ್ಛೆಯಲಿ ದಡ
ವೆರಡ ಕೆಡಿಸುವವೋಲು ನಾರಿಯ
ರುಠವಣೆಗೆ ಕೈಗೊಟ್ಟು ಕೈ ಗೊಟ್ಟು ನಡೆಸಿದಡುಭಯ ವಂಶವನು
ನೆರಹುವಳು ನೀರೊಳಗೆ ಮೇರೆಯ
ಮುರಿಯಲೀಯದೆ ಮಾರ್ಗದಲಿ ಮ
ತ್ಸರಿಸದಾಳುವುದನುನಯವು ಭೂಪಾಲ ಕೇಳೆಂದ ೧೬

ಧರೆಯೊಳಗೆ ಕಡುಮೂರ್ಖರಿವರಿ
ಬ್ಬರು ಕರ್ಣಾ ದುರಿಯೋಧನನು ದಶ
ಶಿರನು ಗೋಗ್ರಹಣದಲಿ ವನ ಭಂಗದಲಿ ಮುಂಕೊಂಡು
ಅರಿನೃಪರ ಸತ್ವಾತಿಶಯದು
ಬ್ಬರದ ಬಲುಹನು ಕಂಡು ಕಂಡೆ
ಚ್ಚರದೆ ಮರುಳಹುದುಚಿತವೇ ಭೂಪಾಲ ಕೇಳೆಂದ ೧೭

ಕರಣಿಕನ ಹಗೆಗೊಂಡವಂಗೈ
ಶ್ವರಿಯ ಹಾನಿ ಚಿಕಿತ್ಸಕನನಾ
ದರಿಸದಾತಂಗಾಗದಾಯುಷ್ಯಾಭಿವೃದ್ಧಿಗಳು
ಅರಸ ಕೇಳಾಯುಷ್ಯ ಭಾಗ್ಯಗ
ಳೆರಡು ಕೆಡುವವು ತಪ್ಪದವನೀ
ಸುರರ ಬದ್ಧದ್ವೇಷ ಲೇಸಲ್ಲೆಂದನಾ ವಿದುರ ೧೮

ಧರೆಯೊಳಗೆ ರವಿಮಂಡಲವನೊದೆ
ದುರವಣಿಸಿ ಹಾಯ್ವವರು ತಾವಿ
ಬ್ಬರು ಕರ್ಣಾ ಸನ್ಯಾಸಿಯಾಗಿಯೆ ಯೋಗಮಾರ್ಗದಲಿ
ಹರಣವನು ಬಿಟ್ಟವರುಗಳು ಸಂ
ಗರದೊಳಭಿಮುಖರಾಗಿ ಮರಣಾಂ
ತರವನೆಯ್ದುವರವರು ಅವನೀಪಾಲ ಕೇಳೆಂದ ೧೯

೧೫. ಧರ್ಮಮಾರ್ಗದಿಂದ ಧನವನ್ನು ಅರ್ಜಿಸಿದರೆ, ಅದರ ದುಪ್ಪಟ್ಟಾಗಿ ಐಶ್ವರ್ಯವು ಹೆಚ್ಚುತ್ತ ಹೋಗುತ್ತದೆ. ಅದರಿಂದ ರಾಷ್ಟ್ರಕ್ಕೆ ಕಲ್ಯಾಣ ಉಂಟು. ತನ್ನ ಪತ್ನೀಪುತ್ರರಿಗೂ ಹಿತ ಉಂಟು. ವೈರಿಗಳೂ ಅಡಗುತ್ತಾರೆ. ಈಗ ನೀನು ಆಸುರದ ಅಧರ್ಮಮಾರ್ಗವನ್ನು ಹಿಡಿಯುತ್ತಿದ್ದೀಯೆ. ಇದನ್ನು ತ್ಯಜಿಸಿ ಧರ್ಮಮಾರ್ಗವನ್ನವಲಂಬಿಸು.

೧೬. ಹರಿಯುವ ಹೊಳೆ ಮೇರೆಯನ್ನು ದಾಟಿ ಉಕ್ಕಿ ಹರಿದರೆ ಎರಡು ದಡಗಳೂ ಕುಸಿದು ಹಾಳಾಗುತ್ತವೆ. ಹೆಂಗಸರು ಮರ್ಯಾದೆಯನ್ನು ಬಿಟ್ಟು ಮನಬಂದಂತೆ ಉರವಣಿಸಿ ನಡೆದರೆ, ಹುಟ್ಟಿದ ಕುಲ ಸೇರಿದ ಕುಲ–ಇವೆರಡನ್ನೂ ಹಾಳುಮಾಡಿ ಕೆಟ್ಟ ಹೆಸರನ್ನು ತರುತ್ತಾರೆ. ನಂಬಿದವರನ್ನು ನೀರಲ್ಲಿ ಮುಳುಗಿಸುತ್ತಾರೆ. ಹಾಗೆಯೇ ರಾಜನು ನೀತಿಯನ್ನುಲ್ಲಂಘಿಸದೆ ಮಧ್ಯವರ್ತಿಯಾಗಿ ನಡೆಯುವುದು ಸರಿಯಾದ ಮಾರ್ಗ.

೧೭. ಧೃತರಾಷ್ಟ್ರ, ಈ ಲೋಕದಲ್ಲಿ ಇಬ್ಬರು ಕಡುಮೂರ್ಖರು! ಒಬ್ಬ ನಿನ್ನ ಮಗ ದುರ್ಯೋಧನ, ಇನ್ನೊಬ್ಬ ರಾವಣ! ವಿರಾಟನಗರದ ಗೋಗ್ರಹಣ ಕಾಲದಲ್ಲಿ ಅರ್ಜುನನ ಶೌರ್ಯವನ್ನೂ ಅಶೋಕವನ ಭಂಗದಲ್ಲಿ ಹನುಮಂತನ ಉಬ್ಬರವನ್ನೂ ಇವರಿಬ್ಬರು ಕಂಡರೂ ಎದುರಾಳಿಗಳ ಬಲ ಎಂತಹುದೆಂಬುದನ್ನು ಅರಿತರೂ ಮರುಳತನದಿಂದ ನಡೆಯಬಹುದೆ?

೧೮. ಶಾನುಭೋಗನೊಡನೆ ಹಗೆತನವನ್ನು ಬೆಳೆಸಿದರೆ ಧನದ ಹಾನಿ! ವೈದ್ಯನೊಡನೆ ವೈರವನ್ನು ಬೆಳೆಸಿದರೆ ಆಯುಷ್ಯದ ಹಾನಿ! ರಾಜ, ಸಜ್ಜನರನ್ನು ದ್ವೇಷಿಸಿದರೆ ಧನ ಆಯುಷ್ಯ ಇವೆರಡೂ ಹಾನಿಗೆ ಒಳಗಾಗುತ್ತವೆ. ಆದ್ದರಿಂದ ಸಜ್ಜನರೊಡನೆ ದ್ವೇಷವನ್ನು ಬೆಳೆಸಬಾರದು.

೧೯. ಮರಣಾನಂತರದಲ್ಲಿ ಸದ್ಗತಿಯನ್ನು ಪಡೆಯತಕ್ಕವರು ಇಬ್ಬರು: ಸಂನ್ಯಾಸಿಯಾಗಿದ್ದು ಯೋಗಮಾರ್ಗದಲ್ಲಿ ಪ್ರಾಣವನ್ನು ಬಿಡತಕ್ಕವನು ಒಬ್ಬನು. ಯುದ್ಧಭೂಮಿಯಲ್ಲಿ ವೈರಿಗಳೊಡನೆ ಹೋರಾಡುತ್ತ ಸಾಯತಕ್ಕವನು ಇನ್ನೊಬ್ಬನು. (ಆದ್ದರಿಂದ ಕ್ಷಾತ್ರಧರ್ಮವು ಕಳಪೆಯೆಂದು ತಿಳಿಯಬೇಡ).

ಮಾತಾಪಿತೃಗಳು ಶತ್ರು ಭಾವವ
ನಾಂತು ನಿಜಸಂತಾನದಲಿ ಸಂ
ಪ್ರೀತಿಯನು ನೆಲೆಗೊಳಿಸಿ ಸರ್ವಜ್ಞಾಧಿಕಾರದಲಿ
ಖ್ಯಾತರನು ಮಾಡದಡೆ ಹಂಸ
ವ್ರಾತ ಮಧ್ಯದ ಬಕನವೊಲು ವಿ
ಖ್ಯಾತ ಸಭೆಯೊಳು ಯೋಗ್ಯರಹರೇ ಭೂಪ ಕೇಳೆಂದ ೨೦

ಸುರರ ಮೇಳದಲಾಡುವವರಿ
ಬ್ಬರು ಕಣಾ ಪ್ರಭುವಾಗಿಯು ಕ್ಷಮೆ
ವೆರಸಿದವನು ದರಿದ್ರನಾಗಿಯು ದಾನಿಯೆನಿಸುವನು
ಅರಿದೆನಿಸದತಿಬಲನ ಧರ್ಮೋ
ತ್ಕರುಷ ದುರ್ಬಲಯುತನ ಸೈರಣೆ
ಸರಿಸವೆನಿಸದು ರಾಯ ಚಿತ್ತೈಸೆಂದನಾ ವಿದುರ ೨೧

ಧರಣಿ ನುಂಗುವಳಿಬ್ಬರನು ಸಂ
ಗರವ ಜಯಿಸದ ನೃಪನ ದೇಶಾಂ
ತರವ ಚರಿಸದ ಪಂಡಿತನನಿದು ಶಾಸ್ತ್ರಸಿದ್ಧವಲೆ
ಅರಸು ಕುಲದಲಿ ಹುಟ್ಟಿ ಸಾಪ
ತ್ನರುಗಳಿರೆ ದೇಹಾಭಿಲಾಷೆಯ
ಉರಗನಂತೊಳಗಿಹುದು ಧರ್ಮವೆಯೆಂದನಾ ವಿದುರ ೨೨

ನರಜನುಮವತ್ಯಧಿಕವದರೊಳು
ಗುರು ಹಿರಿಯರಿವರೆಂದು ದಾನ
ಕ್ಕರುಹರಿವರಲ್ಲೆಂದು ನೋಡದೆ ಮೂಢ ಮಾರ್ಗದಲಿ
ಕರೆದಪಾತ್ರಂಗಿತ್ತು ಪಾತ್ರನ
ಪರಿಹರಿಸಲೀ ಎರಡರಿಂ ಸಂ
ಹರಣವೈದುವುದಾರ್ಜಿಸಿದ ಧನವರಸ ಕೇಳೆಂದ ೨೩

ತಂದೆ ತಾಯಿಗಳಿಬ್ಬರಾತ್ಮಜ
ವೃಂದವನು ಮಿಗೆ ಸಲಹಿ ತತ್ಸುತ
ರಿಂದ ಲೇಸನು ಪಡೆವವೊಲು ತಜ್ಜನಪದದ ಧನವ
ಕುಂದಿಸದೆ ನೃಪ ಮಂತ್ರಿಗಳು ಸಾ
ನಂದದಲಿ ರಕ್ಷಿಸಲು ಬಳಿಕವ
ರಿಂದ ಸಕಲೈಶ್ವರ್ಯ ಪದವಹುದರಸ ಕೇಳೆಂದ ೨೪

೨೦. ತಾಯಿತಂದೆಗಳು ಮಕ್ಕಳನ್ನು ಪ್ರೀತಿಸಿ ಚೆನ್ನಾಗಿ ವಿದ್ಯಭ್ಯಾಸ ಮಾಡಿಸಬೇಕು. ಇಲ್ಲದಿದ್ದರೆ ಮಕ್ಕಳಿಗೆ ತಾಯಿತಂದೆಗಳೇ ಶತ್ರುಗಳೆಂದು ತಿಳಿಯಬೇಕಾಗುತ್ತದೆ. ವಿದ್ಯಾವಿಹೀನರು ಸಭೆಯಲ್ಲಿ ಪ್ರಕಾಶಿಸುತ್ತಾರೆಯೆ? ಪಂಡಿತ ಸಭೆಯಲ್ಲಿ ವಿದ್ಯಾದೀನರು, ಹಂಸಗಳ ಮಧ್ಯದಲ್ಲಿರುವ ಬಕಪಕ್ಷಿಗಳಂತೆ ಕಾಣುತ್ತಾರೆ.

೨೧. ದಂಡಿಸಲು ಸಾಮರ್ಥ್ಯವಿದ್ದರೂ ಯಾವನು ಕ್ಷಮಿಸುವನೋ, ದರಿದ್ರನಾಗಿದ್ದರೂ ಯಾವನು ದಾನಮಾಡುವನೋ ಇವರಿಬ್ಬರು ಸ್ವರ್ಗದಲ್ಲಿ ದೇವತೆಗಳೊಡನೆ ನಲಿಯುತ್ತಾರೆ. ಧನವಂತನು ಮಾಡುವ ದಾನವಾಗಲಿ ಕೈಲಾಗದವನ ಸೈರಣೆಯಾಗಲಿ ಹೆಚ್ಚಿನದಲ್ಲ.

೨೨. ಯುದ್ಧದಲ್ಲಿ ಜಯವನ್ನು ಗಳಿಸಲಾರದ ದೊರೆಯನ್ನೂ ದೇಶಾಂತರದಲ್ಲಿ ಸಂಚಾರವನ್ನು ಮಾಡದೆ ಒಂದೇ ಎಡೆಯಲ್ಲಿರುವ ವಿದ್ವಾಂಸನನ್ನೂ ಭೂದೇವಿಯು ನುಂಗಿಬಿಡುವಳು! ಇದು ಶಾಸ್ತ್ರಸಿದ್ಧವಾದ ವಿಷಯ. ಅರಸು ಕುಲದಲ್ಲಿ ಹುಟ್ಟಿಯೂ ಶತ್ರುಗಳು ಇದ್ದಾಗಲೂ ಪ್ರತೀಕಾರವನ್ನು ಕೈಗೊಳ್ಳದೆ ದೇಹಾಭಿಮಾನದಿಂದ, ಹಾವಿನಂತೆ ಒಳಗೆ ಅಡಗಿಕೊಳ್ಳುವುದು ಧರ್ಮವಲ್ಲ.

೨೩. ಎಲ್ಲ ಜನ್ಮಗಳಿಗಿಂತಲೂ ನರಜನ್ಮವು ಶ್ರೇಷ್ಠವಾದದ್ದು. ಮನುಷ್ಯನಾಗಿ ಹುಟ್ಟಿಯೂ ಗುರುಹಿರಿಯರು ಯಾರು, ದಾನಕ್ಕೆ ಪಾತ್ರರು ಯಾರು, ಅಪಾತ್ರರು ಯಾರು ಎಂದು ವಿಚಾರಿಸದೆ, ಅಪಾತ್ರನಿಗೆ ದಾನ ಮಾಡಿ ಪಾತ್ರನನ್ನು ದೂರಮಾಡುವುದು ಅಧರ್ಮ. ಇದರಿಂದ ತಾನು ಸಂಪಾದಿಸಿದ ಸಂಪತ್ತು ಕ್ಷೀಣಿಸುತ್ತದೆ.

೨೪. ಧೃತರಾಷ್ಟ್ರ, ತಂದೆತಾಯಂದಿರು ಮಕ್ಕಳನ್ನು ಸಾಕಿಸಲಹಿದರೆ, ಮಕ್ಕಳು ಮೊಮ್ಮಕ್ಕಳಿಂದ ಅವರು ಸೌಖ್ಯವನ್ನು ಪಡೆಯುತ್ತಾರೆ. ಅದರಂತೆಯೇ ರಾಜ್ಯವನ್ನಾಳತಕ್ಕ ರಾಜರೂ ಮಂತ್ರಿಗಳೂ ಪ್ರಜೆಗಳನ್ನು ಪ್ರೀತಿಯಿಂದ ಪೋಷಿಸಿದರೆ, ಪ್ರಜೆಗಳಿಂದ ಅವರ ಸುಖಸಂಪತ್ತುಗಳು ಹೆಚ್ಚುತ್ತವೆ.

ಕಾಮಿನಿಯರುಗಳಾರು ಕೆಲಬರು
ಕಾಮಿತವ ಕಾಮಿಸುವರಲ್ಲದೆ
ತಾಮಸದಿನಾ ಮೂರುಕರು ಪೂಜಿಸಿದ ಪೂಜೆಗಳ
ಪ್ರೇಮದಿಂದೊಡಬಡುವರಲ್ಲದೆ
ಸೀಮೆವಿಡಿಹುದಾಗದೆಂಬುದ
ನಾ ಮದಾಂಧರು ಬಲ್ಲರೇ ಧೃತರಾಷ್ಟ್ರ ಕೇಳೆಂದ ೨೫

ತನ್ನ ಸುಖ ದುಃಖಂಗಳಿಗೆ ನಿ
ರ್ಭಿನ್ನರಹ ಬಾಂಧವರ ವರ್ಜಿಸಿ
ಗನ್ನಗತಕದಲುಂಡು ಜಾರುವ ಗಾವಿಲರ ಕೂಡಿ
ಅನ್ಯರನು ಪತಿಕರಿಸಿ ಬಹುಮಾ
ನೋನ್ನತಿಕೆಯನು ವಿರಚಿಸುವುದಿದು
ತನ್ನ ತಾನೇ ಕೊಂದುಕೊಂಬುದು ಭೂಪ ಕೇಳೆಂದ ೨೬

ಪಿತನಿರಲು ದಾತಾರನಿರೆ ನಿಜ
ಪತಿಯಿರಲು ಸುತದಾಸ ಸತಿಯಿ್ೀ
ತ್ರಿತಯರುಂ ಸ್ವಾತಂತ್ರ್ಯದವರಲ್ಲಾವ ಕಾಲದಲಿ
ಕ್ಷಿತಿಯೊಳುತ್ತಮ ಮಧ್ಯಮಾಧಮ
ಗತಿಯ ಪುರುಷತ್ರಯವನವರಿಂ
ಗಿತವನವರಾಯತವನರಿವೈ ಭೂಪ ಕೇಳೆಂದ ೨೭

ಬೆಳಸು ಘನ ತೃಣವಧಿಕ ಜಲ ನಿ
ರ್ಮಳವೆನಿಪ ಕಾಲದಲಿ ಪರಮಂ
ಡಲಕೆ ನಡೆವುದು ಘೃಷ್ಟಪುಷ್ಟವಿಹಾರನೆಂದೆನಿಸಿ
ಬಲುಹಹುದು ನಿಜಬಲಕೆ ಬಲವಾ
ನೆಲನ ಮೆಟ್ಟಲು ವೈರಿ ಸೇನಾ
ವಳಿಗೆ ಹೀನತೆ ದೊರಕುವುದು ಧೃತರಾಷ್ಟ್ರ ಕೇಳೆಂದ ೨೮

ಮಾಲೆಗಾರ ಸಿಳೀಮುಖಿನ ಪಶು
ಪಾಲಕನವೊಲ್ ಪ್ರಜೆಯ ರಕ್ಷಿಸಿ
ಮೇಲೆ ತೆಗೆವೈ ಧನವನುಳಿದಂಗಾರಕಾರಕನ
ವೋಲು ಕಡದುರು ವ್ಯಾಘ್ರನಂತೆ ವಿ
ತಾಳಿಸಲು ಪ್ರಜೆ ನಸಿಯಲರಸಿನ
ಬಾಳಿಕೆಗೆ ಸಂದೇಹವರಿಯಾ ರಾಯ ಕೇಳೆಂದ ೨೯

೨೫. ಕಾಮಾಂಧರಾದ ಕೆಲವು ಹೆಂಗಸರು ತಮ್ಮ ಇಚ್ಛೆಯನ್ನು ಪೂರೈಸಿ ಕೊಳ್ಳುವುದಕ್ಕಾಗಿ ಪುರುಷರನ್ನು ಪ್ರೀತಿಸುವುದುಂಟು. ಹಾಗೆಯೇ ಧೂರ್ತರು ತಮ್ಮ ಇಷ್ಟವನ್ನು ಸಾಧಿಸಿಕೊಳ್ಳುವುದಕ್ಕಾಗಿ ಮೂರ್ಖರನ್ನು ಗೌರವಿಸುತ್ತಾರೆ. ಅವರ ಗೌರವಸತ್ಕಾರಗಳಿಗೆ ತಾವು ಅರ್ಹರೇ ಅಲ್ಲವೇ ಎಂಬುದನ್ನು ತಮೋಗುಣದ ಈ ಮದಾಂಧರು ಆಲೋಚಿಸುವುದಿಲ್ಲ!

೨೬. ಮಹಾರಾಜ, ತನ್ನ ಸುಖದುಃಖಗಳಿಗೆ ಆಗುವ ಬಂಧುಮಿತ್ರರನ್ನು ಕೆಲವರು ತೊರೆದುಬಿಡುತ್ತಾರೆ. ಕಪಟತನದಿಂದ ಒಳ್ಳೆಯ ಮಾತನ್ನಾಡಿ ಉಂಡು ಜಾರಿಹೋಗುವ ನೀಚರೊಡನೆ ಸ್ನೇಹವನ್ನು ಬೆಳಸುತ್ತಾರೆ. ಅವರನ್ನು ಪುರಸ್ಕರಿಸುತ್ತಾರೆ. ತನ್ನನ್ನು ತಾನೇ ಕೊಂದು ಕೊಳ್ಳುವುದೆಂದರೆ ಇದೇ!

೨೭. ತಂದೆ ಇರುವಾಗ ಮಗನೂ ಒಡೆಯನಿರುವಾಗ ಸೇವಕನೂ ಗಂಡನಿರುವಾಗ ಹೆಂಡತಿಯೂ ಮನಬಂದಂತೆ ಸ್ವಾತಂತ್ರ್ಯದಿಂದ ನಡೆಯಬಾರದು. ರಾಜ, ಈ ಜಗತ್ತಿನಲ್ಲಿ ಉತ್ತಮ, ಮಧ್ಯಮ, ಕನಿಷ್ಠ ಎಂಬ ಮೂರು ವರ್ಗದ ಜನರು ಇದ್ದೇ ಇರುತ್ತಾರೆ. ಅವರ ಲಕ್ಷಣಗಳೇನು, ಉದ್ದೇಶಗಳೇನು, ಕಾರ್ಯವಿಸ್ತಾರಗಳು ಯಾವುವು ಎಂಬುದನ್ನು ಸರಿಯಾಗಿ ತಿಳಿದುಕೊ.

೨೮. ಧಾನ್ಯ ಹುಲ್ಲು ನೀರು ಇವುಗಳ ಸಮೃದ್ಧಿ ಇರುವಾಗ ಪರರಾಷ್ಟ್ರದ ಮೇಲೆ ದಂಡೆತ್ತಿ ಹೋಗಬೇಕು. ಆಗ ತನ್ನ ಸೇನೆಗೆ ಆಹಾರ ಮುಂತಾದವುಗಳಲ್ಲಿ ಕೊರತೆಯಾಗುವುದಿಲ್ಲ. ನಮ್ಮ ಬಲ ಅಧಿಕವಾಗಿರುತ್ತದೆ. ವೈರಿಸೇನೆಯನ್ನು ಸೋಲಿಸಬಹುದು.

೨೯. ದೊರೆಯು ಪ್ರಜೆಗಳಿಂದ ಹೇಗೆ ಹಣವನ್ನು ವಸೂಲು ಮಾಡಬೇಕು, ಹೇಗೆ ಅವರನ್ನು ಪಾಲಿಸಬೇಕು ಎಂಬುದನ್ನು ಬಲ್ಲೆಯಾ? ಹೂವಾಡಿಗನು ಗಿಡಮರಗಳಿಂದ ಹೂಗಳನ್ನು ಕೀಳುವಂತೆ, ದುಂಬಿಯು ಹೂಗಳಿಂದ ಬಂಡನ್ನು ಹೀರುವಂತೆ ದೊರೆಯು ಪ್ರಜೆಗಳನ್ನು ಪೀಡಿಸದೆ ಮೃದುವಾಗಿ ಅವರಿಂದ ಕಂದಾಯವನ್ನು ವಸೂಲು ಮಾಡಬೇಕು. ಇದ್ದಿಲು ಮಾಡುವವನಂತೆ ಗಿಡಮರಗಳನ್ನೇ ಬುಡಸಹಿತ ಉರುಳಿಸಬಾರದು! ಪಶುಪಾಲಕನು ಪಶುಗಳನ್ನು ಕಾಯುವಂತೆ, ಪ್ರಜೆಗಳನ್ನು ಹಿತಮಿತವಾದ ರೀತಿಯಲ್ಲಿ ದಾರಿ ತಪ್ಪದಂತೆ ನೋಡಿಕೊಳ್ಳಬೇಕು. ಹುಲಿಯು ದನಗಳನ್ನು ಕಾದಂತೆ ಮಾಡಬಾರದು! ಪ್ರಜೆಗಳು ಕಂಗೆಟ್ಟರೆ ಅರಿಸಿನ ಬಾಳಿಗೇ ಊಣೆಯವಾದೀತು.

ಎಲ್ಲಿಹುದು ಋಣಭಯವು ಮನುಜರೊ
ಳಲ್ಲಿಹುದು ದೇವಾಂಶ ನಿಜವಾ
ಗೆಲ್ಲಿಹುದು ಸನ್ಮಾರ್ಗ ಬಳಿಕಲ್ಲಿಹುದು ಬ್ರಾಹ್ಮಣ್ಯ
ಎಲ್ಲಿಹುದು ಪರಸತಿಯರಂಜಿಕೆ
ಯಲ್ಲಿಹುದು ವಿಜ್ಞಾನವಿದನರಿ
ದಲ್ಲದಿಹಪರವಿಲ್ಲ ಚಿತ್ತೈಸೆಂದನಾ ವಿದುರ ೩೦

ರಕ್ಷಿಸಿದ ಧನದಿಂ ಪುರಂಧ್ರಿಯ
ರಕ್ಷಿಸುವುದು ಪುರಂಧ್ರಿಯಿಂದವೆ
ರಕ್ಷಿಸುವುದಾತ್ಮನನು ಧನವಿಡಿದಾವ ಕಾಲದಲಿ
ಲಕ್ಷ ಭೇದವನರಿದು ನಡೆದು ವಿ
ಲಕ್ಷವನು ಮುರಿದಾತ್ಮ ರಕ್ಷೆಯ
ನೀಕ್ಷಿಸುವುದನುನಯವಲ್ಲೆ ಭೂಪಾಲ ಕೇಳೆಂದ ೩೧

ತಿಳಿದು ನಾಲ್ವರೊಳೊರೆದ ಕಾರ್ಯವ
ನುಳಿವುದಿಬ್ಬರನಿಬ್ಬರೊಳು ಮ
ತ್ತುಳಿವುದೊಬ್ಬನನೊಬ್ಬನಿಂ ನಿಶ್ಚಯಿಸಿ ಬಳಿಕವನ
ಕಳೆದು ತಾನೇ ತನ್ನೊಳಗೆ ಬಗೆ
ಗೊಳೆ ವಿಚಾರಿಸಿ ಮಾಳ್ಪ ಕಾರ್ಯಕೆ
ಹಳಿವು ಹೊರುವುದೆ ರಾಯ ಚಿತ್ತೈಸೆಂದನಾ ವಿದುರ ೩೨

ನಿವಡಿಸಿದ ವಿದ್ಯಕ್ಕೆ ಸಮ ಬಂ
ಧುವನು ರೋಗಾವಳಿಗೆ ಸಮ ಶ
ತ್ರುವನು ಸಂತಾನಕ್ಕೆ ಸಮ ಸಂತೋಷದುದಯವನು
ರವಿಗೆ ಸಮವಹ ತೇಜವನು ವಾ
ಸವನ ಸಮ ಭೋಗವನು ಬಲದಲಿ
ಶಿವನ ಬಲದಿಂದಧಿಕ ಬಲವನು ಕಾಣೆ ನಾನೆಂದ ೩೩

ಹಿರಿದು ಮಾನೋನ್ನತಿಕೆಯನು ಬಂ
ಧುರದ ಧನವನು ಗಾರುಹಸ್ಥದ
ಪರಮಧರ್ಮವನಾವ ಬಯಸುವನವನ ಭವನದಲಿ
ನಿರುತ ವೃದ್ಧ ಜ್ಞಾನಿ ವಂಶೋ
ತ್ತರ ದರಿದ್ರಪ್ರಿಯನಪತ್ಯಾಂ
ತರ ಭಗಿನಿಯಿಾ ನಾಲ್ವರಿರಬೇಕೆಂದನಾ ವಿದುರ ೩೪

೩೦. ಸಾಲದ ವಿಷಯದಲ್ಲಿ ಯಾರಿಗೆ ಭಯವಿದೆಯೋ ಅವರಲ್ಲಿ ದೇವಾಂಶ ವಿದೆಯೆಂದು ತಿಳಿ. ಸನ್ಮಾರ್ಗವಿದ್ದಲ್ಲಿ ಬ್ರಾಹ್ಮಣ್ಯವಿದೆಯೆಂದು ತಿಳಿ. ಪರಸ್ತ್ರೀಯರೆಂಬ ಅಂಜಿಕೆ ಇದ್ದಲ್ಲಿ ವಿವೇಕವಿದೆಯೆಂದು ತಿಳಿ. ಈ ಅಂಶಗಳನ್ನು ಅರಿತು ನಡೆಯದಿದ್ದರೆ ಇಹಪರಗಳೆರಡೂ ಲಭಿಸುವುದಿಲ್ಲ.

೩೧. ತಾನು ಗಳಿಸಿ ಉಳಿಸಿದ ಹಣದಿಂದ ಮೊದಲು ಮಡದಿಯನ್ನು ಸಲಹಬೇಕು. ಮಡದಿಯಿಂದ ತನ್ನ ಹಿತವನ್ನು ಸಾಧಿಸಬೇಕು. ಯಾವುದು ತನಗೆ ಹಿತಕಾರಿ, ಯಾವುದು ಹಿತಕಾರಿಯಲ್ಲ ಎಂಬ ಭೇದವನ್ನರಿತು ಹಣವನ್ನು ವಿನಿಯೋಗಿಸಿ ಆತ್ಮೋನ್ನತಿಯನ್ನು ಸಾಧಿಸಿಕೊಳ್ಳಬೇಕು. ಹಣದ ವಿನಿಯೋಗಕ್ಕೆ ಒಂದು ಗುರಿಯನ್ನಿಟ್ಟು ಕೊಳ್ಳುವುದೇ ಸರಿಯಾದ ನೀತಿ.

೩೨. ಮಹಾರಾಜ, ಒಂದು ತೀರ್ಮಾನವನ್ನು ಕೈಗೊಳ್ಳಬೇಕಾದಾಗ, ಬಲ್ಲ ನಾಲ್ವರಿಗೆ ಅದನ್ನು ತಿಳಿಸಿ ಪರ್ಯಾಲೋಚಿಸಬೇಕು. ಅನಂತರ ಅವರಲ್ಲಿ ಇಬ್ಬರನ್ನು ಬಿಟ್ಟು ಇನ್ನಿಬ್ಬರೊಡನೆ ವಿಚಾರಮಾಡಬೇಕು. ಆಮೇಲೆ ಅವರಲ್ಲೊಬ್ಬನನ್ನು ಕಳೆದು ಒಬ್ಬನೊಡನೆಯೇ ಮಂತ್ರಾಲೋಚನೆಯನ್ನು ನಡೆಸಬೇಕು. ತರುವಾಯ ತಾನೊಬ್ಬನೇ ಚಿಂತಿಸಿ ತೀರ್ಮಾನವನ್ನು ಕೈಗೊಂಡಲ್ಲಿ, ಅದಕ್ಕೆ ಎಂದಿಗೂ ಚ್ಯುತಿ ಇಲ್ಲ.

೩೩. ಗಳಿಸಿದ ವಿದ್ಯೆಗೆ ಸಮನಾದ ಬಂಧುವೂ ರೋಗಕ್ಕೆ ಸಮನಾದ ಶತ್ರುವೂ ಸಂತಾನಕ್ಕೆ ಸಮವಾದ ಸಂತೋಷನಿಮಿತ್ತವೂ ಮತ್ತೊಂದಿಲ್ಲ. ಸೂರ್ಯನ ತೇಜಸ್ಸಿನಂತಹ ತೇಜಸ್ಸು ಇಂದ್ರನ ಭೋಗದಂತಹ ಭೋಗವೂ ಇಲ್ಲ. ಪರಮೇಶ್ವರನಿಗಿಂತ ಹೆಚ್ಚಿನ ಬಲಶಾಲಿಯನ್ನೂ ನಾನು ಕಾಣೆನು.

೩೪. ಹೆಚ್ಚಿನ ಮಾನವನ್ನೂ ಧನವನ್ನೂ ಗೃಹಸ್ಥಧರ್ಮದ ಪಾಲನೆಯನ್ನೂ ಬಯಸತಕ್ಕವನ ಮನೆಯಲ್ಲಿ ಈ ನಾಲ್ವರು ಇರಬೇಕು. ಯಾರೆಂದರೆ ಜ್ಞಾನಿಯಾದ ಒಬ್ಬ ವಯೋವೃದ್ಧ, ಬೇರೆ ಆಶ್ರಯವಿಲ್ಲದ ಉತ್ತಮ ಕುಲದವನು, ಪ್ರಿಯನಾದ ಒಬ್ಬ ಬಡವ ಮತ್ತು ಮಕ್ಕಳಿಲ್ಲದ ಸಹೋದರಿ!

ಟಿಪ್ಪಣಿ ಮಹಾಭಾರತದಲ್ಲಿ ಇದಕ್ಕೆ ಸಂವಾದಿಯಾದ ಶ್ಲೋಕ ಹೀಗಿದೆ :–

ಚತ್ವಾರಿ ತೇ ತಾತ ಗೃಹೇ ವಸಂತು ಶ್ರೀಯಾಭಿಜುಷ್ಟಸ್ಯ ಗೃಹಸ್ಥಧರ್ಮೇ।
ವೃದ್ಧೋಜ್ಞಾತಿರಸವನ್ನಃ ಕುಲೀನಃ ಸದಾ ದರಿದ್ರೋ ಭಗಿನೀ ಚಾನಪತ್ಯಾ॥
ಉದ್ಯೋ: ೩೩-೭೦

ಕನ್ನಡದ ಪದ್ಯದಲ್ಲಿ ಜ್ಞಾನಿ ಶಬ್ದಕ್ಕೆ ಬದಲಾಗಿ ಜ್ಞಾತಿ ಎಂಬ ಪಾಠವಿದ್ದರೆ ಉತ್ತಮ. ಜ್ಞಾತಿ= ಬಂಧು. ಅಪತ್ಯಾಂತರ ಎಂಬ ಶಬ್ದವನ್ನು ಅಪತ್ಯಹೀನ ಎಂಬ ಅರ್ಥದಲ್ಲಿ ಕವಿಯು ಬಳಸಿರಬೇಕು)

ಧರಣಿಪತಿ ಚಿತ್ತವಿಸು ಸ್ವರ್ಗದ
ಲೊರೆದನಿದ್ರಂಗಮರಗುರು ದೇ
ವರಲಿ ಸಂಕಲ್ಪವನು ಕೃತವಿದ್ಯರಲಿ ವಿನಯವನು
ಹಿರಿಯರಲಿ ಸಂಭಾವನೆಯ ಸಂ
ಹರಣ ಪದವನು ಪಾಪ ಕಾರ್ಯದೊ
ಳಿರದೆ ಮಾವುದೆಂಬ ನಾಲ್ಕನು ರಾಯ ಕೇಳೆಂದ ೩೫

ಆವುದೀ ಲೋಕಕ್ಕೆ ಹಿತವದ
ನೋವಿ ನಡೆವ ಜನಕ್ಕೆ ನಿಂದೆಯ
ದಾವುದದನಾಚರಿಸದಿಹ ನಾಸ್ತಿಕರ ನಂಬುಗೆಯ
ಠಾವುಗಾಣದ ತತ್ವವಿಜ್ಞಾ
ನಾವಲಂಬನನೆನಿಪನಾತನು
ಭೂವಲಯದೊಳಗುತ್ತಮನು ಭೂಪಾಲ ಕೇಳೆಂದ ೩೬

ಪಿತನು ಗುರು ಶಿಖಿಯಾತ್ಮ ತಾಯೆಂ
ಬತುಳ ಪಂಚಾಗ್ನಿಯನು ಕ್ರಮದಿಂ
ಪ್ರತಿದಿನಂ ಪರಿಚರಿಯ ಮಾಳ್ಪುದು ಲೇಸ ಬಯಸುವರೆ
ಪಿತೃಗಳನು ದೇವರನು ವೃದ್ಧರ
ನತಿಥಿಗಳ ಪೂಜಿಸಿದನಾವವ
ಪಿತನ ಕೀರ್ತಿಯ ಧರ್ಮವನು ಪಡೆವವನೆ ಸುತನೆಂದ ೩೭

ಸಿರಿಯನುಳ್ಳಮನವನೆ ಕುಲಜನು
ಸಿರಿಯನುಳ್ಳವನೇ ವಿದಗ್ಧನು
ಸಿರಿಯನುಳ್ಳವನೇ ಮಹಾತ್ಮನು ಸಕಲಗುಣಯುತನು
ಸಿರಿಯನುಳ್ಳವನೇ ಸುಶೀಲನು
ಸಿರಿರಹಿತ ಶಿವನಾದೊಡಾಗಲಿ
ಸರಕು ಮಾಡದು ಲೋಕವವನೀಪಾಲ ಕೇಳೆಂದ ೩೮

ಸಿರಿ ನೆಲೆಯೆ ಜವ್ವನ ನೆಲೆಯೆ ಮೈ
ಸಿರಿ ನೆಲೆಯೆ ತನು ನೆಲೆಯೆ ಖಂಡೆಯ
ಸಿರಿ ನೆಲೆಯೆ ನಿನಗರಸುತನವುಳ್ಳನ್ನ ನೀತಿಯಲಿ
ಧರೆಯ ರಕ್ಷಿಸು ಬಂಧುಗಳನು
ದ್ಧರಿಸು ಧರ್ಮವ ಸಾಧಿಸಿಂತಿದು
ನರಪತಿಗಳಿಗೆ ನೀತಿ ಚಿತ್ತೈಸೆಂದನಾ ವಿದುರ ೩೯

೩೫. ಮಹಾರಾಜ, ದೇವಗುರುವಾದ ಬೃಹಸ್ಪತಿಯು ದೇವೇಂದ್ರನಿಗೆ ನಾಲ್ಕು ಅಂಶಗಳನ್ನು ಉಪದೇಶಿಸಿದನು. ಅವು ಯಾವುವೆಂದರೆ: ೧. ದೇವರಲ್ಲಿ ನಂಬಿಕೆಯನ್ನು ಇಡಬೇಕು. ೨. ವಿದ್ಯಾವಂತರಲ್ಲಿ ವಿನಯದಿಂದ ವರ್ತಿಸಬೇಕು. ೩. ಹಿರಿಯರಲ್ಲಿ ಗೌರವವನ್ನು ತೋರಿಸಬೇಕು. ೪. ಪಾಪಕಾರ್ಯದಲ್ಲಿ ಪ್ರವರ್ತಿಸಬಾರದು.

೩೬. ಯಾವುದರಿಂದ ಲೋಕಕ್ಕೆ ಹಿತವಾಗುವುದು, ಯಾವುದರಿಂದ ಜನರಿಗೆ ಕೆಡುಕಾಗುವುದು–ಎಂಬುದನ್ನು ವಿಚಾರಮಾಡಿ ಅದಕ್ಕೆ ಅನುಗುಣವಾಗಿ ನಡೆಯುತ್ತ, ನಾಸ್ತಿಕತೆಯ ಸೋಂಕು ಸಹ ಇಲ್ಲದೆ ಜ್ಞಾನಿಯಾಗಿ ವಿವೇಕಮಾರ್ಗದಲ್ಲಿ ನಡೆಯತಕ್ಕವನು, ಮಹಾರಾಜ, ಈ ಜಗತ್ತಿನಲ್ಲಿ ಶ್ರೇಷ್ಠನಾದ ಮನುಷ್ಯನೆನಿಸುತ್ತಾನೆ.

೩೭. ತಂದೆ, ತಾಯಿ, ಗುರು, ಅಗ್ನಿ, ತನ್ನ ಆತ್ಮ–ಈ ಐವರು ಪಂಚಾಗ್ನಿಗಳು. ಲೇಸನ್ನು ಬಯಸತಕ್ಕವನು ಪ್ರತಿದಿನವೂ ಇವರ ಪರಿಚರ್ಯೆಯನ್ನು ಮಾಡುತ್ತಿರಬೇಕು. ಪಿತೃಗಳನ್ನೂ ದೇವರನ್ನೂ ಹಿರಿಯರನ್ನೂ ಅತಿಥಿಗಳನ್ನೂ ಪೂಜಿಸಬೇಕು. ಯಾವನು ತನ್ನ ತಂದೆಯ ಕೀರ್ತಿಯನ್ನು ಉಳಿಸಿಕೊಂಡು ತಂದೆಯು ನಡೆಸುತ್ತಿದ್ದ ಧರ್ಮಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಾನೋ ಅವನೇ ಮಗನೆನಿಸಲು ಅರ್ಹನಾಗುತ್ತಾನೆ.

೩೮. ಲೋಕದಲ್ಲಿ ಜನರು ಹಣವನ್ನು ಮಾತ್ರವೇ ಗೌರವಿಸುತ್ತಾರೆ. ಹಣವಂತನೇ ಉತ್ತಮಕುಲದವನು, ಅವನೇ ವಿದ್ಯಾವಂತ, ಮಹಾತ್ಮ, ಅವನೇ ಗುಣಶಾಲಿ ಎಂದು ತಿಳಿಯುತ್ತಾರೆ. ಹಣವಂತನೇ ಒಳ್ಳೆಯ ನಡತೆಯವನೆಂದು ನಂಬುತ್ತಾರೆ. ಹಣವಿಲ್ಲದವನು ಸಾಕ್ಷಾತ್ ಶಿವನೇ ಆದರೂ ಜನರು ಲೆಕ್ಕಿಸುವುದಿಲ್ಲ.

೩೯. ಧೃತರಾಷ್ಟ್ರ, ಐಶ್ವರ್ಯವಾಗಲಿ ಯೌವನವಾಗಲಿ ಸ್ಥಿರವಾಗಿ ನಿಲ್ಲತಕ್ಕದ್ದಲ್ಲ. ಮುಪ್ಪು ಬಂದಾಗ ದೇಹದ ಸೌಂದರ್ಯವೂ ನಶಿಸಿ ಹೋಗುವುದು. ಇನ್ನು ದೇಹವಂತೂ ಶಾಶ್ವತವೇ ಅಲ್ಲ. ಜಯದ ಸಿರಿಯೂ ನಿಲ್ಲತಕ್ಕದ್ದಲ್ಲ. ಆದ್ದರಿಂದ ನೀನು ಅರಸನಾಗಿ ಇರುವವರೆಗೆ ನೀತಿಯಿಂದ ರಾಜ್ಯವನ್ನಾಳು. ಬಂಧುಗಳನ್ನು ರಕ್ಷಿಸು. ಧರ್ಮವನ್ನು ಸಾಧಿಸು. ಎಲ್ಲ ಅರಸರೂ ಅವಶ್ಯವಾಗಿ ಪಾಲಿಸಬೇಕಾದ ನೀತಿ ಇದು.

ವರುಷವೈದರೊಳರಸೆನಿಸಿ ದಶ
ವರುಷ ದಾಸತ್ವವನು ಭಾವಿಸಿ
ವರುಷ ಹದಿನಾರರಲಿ ಪುತ್ರನ ಮಿತ್ರನೆಂದೆನಿಸಿ
ಪರಿವಿಡಿಗಳಲಿ ನಡೆಸಿ ಮದ ಮ
ತ್ಸರವ ಮಾಣಿಸಿ ನೆರೆದ ಮಕ್ಕಳ
ನರಮೃಗವ ಮಾಡುವರೆ ಭೂಮೀಪಾಲ ಕೇಳೆಂದ ೪೦

ಧನಮದದಿ ಕುಲಮದದಿ ವಿದ್ಯಾ
ಘನದಿ ಯವ್ವನ ಮದದಿ ದ್ವಿಜಗುರು
ವನು ವಿಭಾಡಿಸಿ ನೀನು ತಾನೆಂದೆನುತ ಹೂಂಕರಿಸಿ
ಮುನಿಸಿನಲಿ ಸಾತ್ವಿಕರೊಳೊಬ್ಬರ
ನನುಗಡಿಸಿ ಗರ್ಜಿಸಲು ನರಕದಿ
ಮುಣುಗಿದಲ್ಲದೆ ಬೇರೆ ಗತಿಯಿಲ್ಲೆಂದನಾ ವಿದುರ ೪೧

ಸಲಹಿದೊಡೆಯನ ದಿವ್ಯಮಂತ್ರವ
ಕಲಿಸಿದಾಚಾರ್ಯನನು ಅನುವರ
ದೊಳಗೆ ತಲೆಗಾಯಿದನ ದುರ್ಭಿಕ್ಷದಲಿ ಸಲಹಿದನ
ಜಲದೊಳಾಳ್ದನನೆತ್ತಿದನನುರಿ
ಯೊಳಗೆ ಪರಿಹರಿಸಿದನ ಮರೆದವ
ನಿಳಿವನೈ ಕುಲಕೋಟಿ ಸಹಿತ ಮಹಾಂಧ ನರಕದಲಿ ೪೨

ಒಲಿದವಳ ಬಿಸುಟೊಲ್ಲದವಳಿಗೆ
ಹಲುಬುವವನಹಿತರಲಿ ಸಖ್ಯಾ
ವಳಿಯನೆಸಗುವನರಿಯದುದ ತಾ ಬಲ್ಲೆನೆಂಬವನ
ಒಲಿದು ಕೇಳದೆ ಹೇಳುವವ ಕೈ
ನಿಲುಕಲರಿಯದ ಕಾರ್ಯದಲಿ ಹಂ
ಬಲಿಸಿ ಮರುಗುವನವನೆ ಮೂಢನು ರಾಯ ಕೇಳೆಂದ ೪೩

ಹರುಷ ದರ್ಪ ಕ್ರೋಧ ಲಜ್ಜಾ
ತುರತೆ ಮಾನ ವಿಮಾನವಿವರಲಿ
ನಿರುತ ಸಮನೆಂದೆನಿಸಿ ಕೃತ್ಯಾಕೃತ್ಯ ಕೌಶಲವ
ವಿರಚಿಸುವ ಕಾಲದಲಿ ಶೀತೋ
ಷ್ಣರದಿ ಭಯವೊಡ್ಡೈಸಲದರಿಂ
ಪರಿಹರಿಸದಾ ಕಾರ್ಯವೆಸಗುವನವನೆ ಪಂಡಿತನು ೪೪

೪೦. ಮಕ್ಕಳನ್ನು ಮೊದಲು ಐದು ವರ್ಷಗಳವರೆಗೆ ರಾಜನಂತೆ ಕಂಡು ಪ್ರೀತಿಸಿ ಆದರಿಸಬೇಕು. ಆಮೇಲೆ ಹತ್ತುವರ್ಷಗಳ ಕಾಲ ಸೇವಕನಂತೆ ನಡೆಸಿಕೊಂಡು ಬುದ್ಧಿಹೇಳಿ ತಿದ್ದಬೇಕು. ಅವರಿಗೆ ಹದಿನಾರು ವರ್ಷಗಳಾದ ಮೇಲೆ ಸ್ನೇಹಿತರಂತೆ ಕಾಣುತ್ತ ಅವರಲ್ಲಿ ಮದಮತ್ಸರಾದಿ ದೋಷಗಳು ಬೆಳೆಯದಂತೆ ಹಿತೋಪದೇಶವನ್ನು ಮಾಡುತ್ತಿರಬೇಕು. ಹಾಗಲ್ಲದೆ ನರಪಶುಗಳಾಗಿ ಬೆಳೆಯುವಂತೆ ಮಕ್ಕಳನ್ನು ಉಪೇಕ್ಷಿಸುವುದುಂಟೆ?

೪೧. ಹಣದ ಮದ, ಕುಲದ ಮದ, ವಿದ್ಯೆಯ ಮದ, ತಾರುಣ್ಯದ ಮದ ಇವುಗಳಿಂದ ಗುರುಹಿರಿಯರನ್ನು ಲೆಕ್ಕಿಸದೆ ನೀನು–ತಾನು ಎಂದು ಹೊಂಕರಿಸುತ್ತ ಕೊಬ್ಬಿನಿಂದ ನಡೆದುಕೊಂಡರೆ, ಅವರಿಗೆ ನರಕದಲ್ಲಿ ಮುಳುಗುವುದೇ ಗತಿ; ಬೇರೆ ಗತಿ ಇಲ್ಲ.

೪೨. ಅನ್ನ ಬಟ್ಟೆಗಳನ್ನಿತ್ತು ಕಾಪಾಡಿದವನು. ವಿದ್ಯೆಯನ್ನು ಕಲಿಸಿದ ಗುರು, ಯುದ್ಧಕಾಲದಲ್ಲಿ ಪ್ರಾಣವನ್ನುಳಿಸಿದವನು, ಬರಗಾಲದಲ್ಲಿ ಸಲಹಿದವನು, ನೀರಲ್ಲಿ ಬಿದ್ದಾಗ ಎತ್ತಿದವನು, ಬೆಂಕಿಯಲ್ಲಿ ಸಿಕ್ಕಿದಾಗ ಬದುಕಿಸಿದವನು–ಈ ಆರು ಮಂದಿಯನ್ನು ಎಂದಿಗೂ ಮರೆಯಬಾರದು. ಇಂಥವರನ್ನು ಮರೆತರ ಘೋರನರಕದಲ್ಲಿ ಇಳಿಯಬೇಕಾಗುತ್ತದೆ.

೪೩. ಮಹಾರಾಜ, ಒಲಿದ ಹೆಂಗಸನ್ನು ಕೈಬಿಟ್ಟು ಒಲಿಯದವಳಿಗಾಗಿ ಹಂಬಲಿಸತಕ್ಕವನು, ಕೆಟ್ಟ ಜನರಲ್ಲಿ ಸ್ನೇಹವನ್ನು ಬೆಳೆಸತಕ್ಕವನು, ತನಗೆ ಗೊತ್ತಿಲ್ಲದಿದ್ದರೂ ಗೊತ್ತಿದೆಯೆಂದು ಹೇಳತಕ್ಕವನು, ತನ್ನನ್ನು ಕೇಳದಿದ್ದರೂ ತಾನಾಗಿ ಹೇಳತಕ್ಕವನು, ತನ್ನ ಕೈಯಲ್ಲಿ ಸಾಗದಿರುವ ದೊಡ್ಡಕೆಲಸದಲ್ಲಿ ಕೈಹಾಕತಕ್ಕವನು – ಇವರೆಲ್ಲರೂ ಮೂಢರೆಂದು ತಿಳಿ.

೪೪. ಇದು ಒಳ್ಳೆಯದು ಇದು ಕೆಟ್ಟದು ಎಂಬುದನ್ನು ವಿಚಾರಿಸಿ ಒಳ್ಳೆಯ ಕಾರ್ಯವನ್ನಾರಂಭಿಸಿದಾಗ ಸಂತೋಷ, ದರ್ಪ, ಕೋಪ, ನಾಚಿಕೆ, ಮಾನ, ಅವಮಾನಗಳ ಪ್ರಸಂಗವು ಬಂದರೂ, ಯಾವ ಅಡ್ಡಿಯು ಬಂದರೂ ಲೆಕ್ಕಿಸದೆ ಯಾವನು ಹಿಡಿದ ಕೆಲಸವನ್ನು ಸಾಧಿಸುತ್ತಾನೆಯೋ ಅವನೇ ಪಂಡಿತ.

ಕರೆಕರೆದು ಮೃಷ್ಟಾನ್ನವನು ಭೂ
ಸುರರಿಗೀವ ಸದಾಗ್ನಿಹೋತ್ರಾ
ಚರಿತನಹ ವೇದಾಂತ ವೇದಿಯನಾ ಪತಿವ್ರತೆಯ
ಉರುತರದ ಮಾಸೋಪವಾಸಿಯ
ನಿರದೆ ಮಾಸ ಸಹಸ್ರ ಜೀವಿಯ
ನರಸ ಕೇಳಭಿವಂದಿಸುವರೈ ಮೂರು ಮೂರ್ತಿಗಳು ೪೫

ಬಿಸಟು ಕಳೆವುದು ನೀತಿ ಶಾಸ್ತ್ರವ
ನುಸುರದಾಚಾರಿಯನ ವೇದ
ಪ್ರಸರವಿಲ್ಲದ ಋಷಿಜನವ ರಕ್ಷಿಸದ ಭೂಭುಜನ
ಒಸೆಯದಬಲೆಯನೂರೊಳಾಡುವ
ಪಶುವ ಕಾಯ್ದನನಡವಿಗುರಿಯಹ
ನುಸಿಯನಾಪಿತನಿಂತರುವರನು ರಾಯ ಕೇಳೆಂದ ೪೬

ವ್ಯಸನವೇಳರ ಕಾಲು ಕಣ್ಣಿಯ
ಹಸರದೊಳಗಳವಳಿದು ಹೆಚ್ಚಿದ
ವಿಷಮದಿರುಬಿನೊಳದ್ದು ಮಾಯಾಮಯದ ತೋಹಿನಲಿ
ಬಸವಳಿದು ಷಡುವರ್ಗ ವೇಧೆಯ
ನುಸುಳುಗಂಡಿಯನೀಕ್ಷಿಸದೆ ತಾ
ಮಸದೊಳಿರುತಿಹುಚಿತವೇ ಹೇಳೆಂದನಾ ವಿದುರ ೪೭

ಅತಿಬಲನ ಹಗೆಗೊಳುವನಿಹಪರ
ಗತಿ ವಿಚಾರವ ಮರೆವ ಲೋಕ
ಸ್ಥಿತಿಯನುಲ್ಲಂಘಿಸುವ ಮರ್ಮಜ್ಞರ ವಿರೋಧಿಸುವ
ವಿತತ ಭಾಷಿತನಪ್ಪ ತನ್ನಿಂ
ಗಿತವನವರಾಯತವನರಿಯದ
ಕ್ಷಿತಿಪನವ ಮೂಢಾತ್ಮನೈ ಭೂಪಾಲ ಕೇಳೆಂದ ೪೮

ಬಲುಹರಿದು ಕೋಪಿಸುವ ಬದುಕಿನ
ಬಳಿಯರಿದು ಕೊಡುವಾತ್ಮ ಹಿತವನು
ತಿಳಿದು ನಿರ್ಮಲವೆನಿಪ ಮೇಲಣ ತಾಗು ಬಾಗುಗಳ
ಹೊಲಬರಿದು ಸುಖ ದುಃಖದಲಿ ಸಂ
ಚಲಿಸದಿಹ ಗಂಗಾ ಮಡುವಿನಂ
ತೊಳಗುದೋರದೆ ನಡೆವವನು ಪಂಡಿತನು ಕೇಳೆಂದ ೪೯

೪೫. ಯೋಗ್ಯರಾದ ಬ್ರಾಹ್ಮಣರನ್ನು ಕರೆದು ಸಂತರ್ಪಣೆ ಮಾಡಿಸುವನು, ತಪ್ಪದೆ ಅಗ್ನಿಹೋತ್ರವನ್ನು ನಡೆಸತಕ್ಕವನು, ವೇದಾಂತವನ್ನು ಬಲ್ಲವನು, ಪತಿವ್ರತೆಯಾದ ಸ್ತ್ರೀ, ನಿಯಮಪಾಲನೆಗಾಗಿ ಒಂದು ತಿಂಗಳವರೆಗಾದರೂ ಉಪವಾಸಮಾಡತಕ್ಕವನು, ಒಂದು ಸಾವಿರ ತಿಂಗಳು–ಎಂದರೆ ಸುಮಾರು ಎಂಬತ್ತುಮೂರುವರ್ಷಗಳಾಗಿರುರ ವೃದ್ಧ– ಇವರೆಲ್ಲರೂ ಪೂಜಾರ್ಹರು. ತ್ರಿಮೂರ್ತಿಗಳೂ ಸಹ ಈ ಮಹಾತ್ಮರಿಗೆ ವಂದನೆಗಳನ್ನ ರ್ಪಿಸುತ್ತಾರೆ.

೪೬. ನೀತಿಯನ್ನು ಬೋಧಿಸದ ಗುರು, ವೇದಾಭ್ಯಾಸವನ್ನು ಮಾಡದಿರುವ ಬ್ರಾಹ್ಮಣ, ಪ್ರಜೆಗಳನ್ನು ಪಾಲಿಸದಿರುವ ರಾಜ, ಪ್ರೀತಿಯಿಲ್ಲದ ಹೆಂಡತಿ, ಊರಲ್ಲಿಯೇ ಅಲೆದಾಡುವ ದನಕಾಯುವವನು, ಕಾಡಿನಲ್ಲಿಯೇ ತಿರುಗಾಡುವ ಕ್ಷೌರಿಕ ಈ ಆರುಜನರನ್ನು ವರ್ಜಿಸಬೇಕು.

೪೭. ನ್ಯಾಯ ಮಾರ್ಗದಲ್ಲಿ ಮುಂದುವರಿಯುವವನಿಗೆ ಮದ್ಯಪಾನ, ಜೂಜು, ಕಾಮುಕತೆ, ಬೇಟೆ, ಕ್ರೂರವಾಗಿ ದಂಡಿಸುವುದು, ಕೆಟ್ಟಮಾತಾಡುವುದು, ದುಂದುವೆಚ್ಚ ಈ ಸಪ್ತವ್ಯಸನಗಳು ಕಾಲುಗಳನ್ನು ಕಟ್ಟಿಹಾಕುವ ಹಗ್ಗಗಳಿದ್ದಂತೆ ಎಂದು ತಿಳಿ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ್ಯ–ಇವು ಆರು ಕುಸಿದು ಬೀಳುವ ಉಸುಬಿನ ಗುಂಡಿಗಳು. ಇವೆಲ್ಲವನ್ನೂ ಪರಿತ್ಯಜಿಸದೆ ತಾಮಸ ಗುಣದಿಂದಲೇ ಮುಂದುವರಿಯುವುದು ಉಚಿತವಲ್ಲ.

೪೮. ತನಗಿಂತಲೂ ಬಲಶಾಲಿಯಾದವನೊಡನೆ ಹಗೆತನವನ್ನು ಬೆಳೆಸುವುದು, ಇಹಪರಗಳನ್ನು ವಿಚಾರಿಸದಿರುವುದು ಲೋಕಮರ್ಯಾದೆಯನ್ನು ಮೀರಿನಡೆಯುವುದು, ಬಲ್ಲವರನ್ನು ವಿರೋಧಿಸುವುದು, ಬಹಳ ಮಾತಾಡುವುದು, ತನ್ನ ಧ್ಯೇಯವೇನೆಂಬುದನ್ನೇ ನಿಶ್ಚಯಿಸದಿರುವುದು. ಪರರ ಅಭಿಪ್ರಾಯವನ್ನು ಅರಿತುಕೊಳ್ಳದಿರುವುದು ಇವು ರಾಜನ ಮೂಢತನವನ್ನು ತೋರಿಸುತ್ತವೆ.

೪೯. ತನ್ನ ಯೋಗ್ಯತೆಯನ್ನರಿತು ಅಪರಾಧಕ್ಕೆ ತಕ್ಕ ಕೋಪ, ಅರ್ಹತೆಗೆ ತಕ್ಕ ದಾನ, ಆತ್ಮಹಿತವನ್ನು ಸಾಧಿಸುವ ಚೊಕ್ಕಟವಾದ ನಡತೆ, ಸುಖದುಃಖಗಳಲ್ಲಿ–ಏರುಪೇರುಗಳಲ್ಲಿ ಆಳವಾದ ಗಂಗೆಯ ಮಡುವಿನಂತೆ ಕದಲದಿರುವುದು–ಇವು ಪಂಡಿತನ ಲಕ್ಷಣಗಳು.

ದಾನವಿಲ್ಲದ ವಿತ್ತ ಬುಧ ಸ
ನ್ಮಾನವಿಲ್ಲದ ರಾಜ್ಯ ಬಲು ಸುಯಿ
ಧಾನವಿಲ್ಲದ ಸುದತಿ ಧೀಮಾನಿಲ್ಲದಾಸ್ಥಾನ
ಜ್ಞಾನವಿಲ್ಲದ ತಪವು ವೇದ ವಿ
ಧಾನವಿಲ್ಲದ ವಿಪ್ರ ಶರಸಂ
ಧಾನವಿಲ್ಲದ ಸಮರ ಮೆರೆಯದು ರಾಯ ಕೇಳೆಂದ ೫೦

ದಿನವ ಬಂಜೆಯ ಮಾಡದಿಹಪರ
ವಿನಯಯನಹ ವರ ದೈವ ಗುರು ಪೂ
ಜನೆಯ ಬುಧ ಸೇವನೆಯ ಕಾಲೋಚಿತದ ವಿವರಣವ
ಮನನದಿಂದಾ ಶ್ರವಣ ವಿದ್ಯಾ
ಸನದಿನಿವನನುಗೊಳಿಪನಾವನು
ಮನುಜರೊಳಗುತ್ತಮನೆಲೆ ಭೂಪಾಲ ಕೇಳೆಂದ ೫೧

ಸಲುವೆನೆಂದಂತಃಪುರಕೆ ಸಂ
ಚಲಿಸುವವನಾಪ್ತರನು ಬಿಸುಟ
ಗ್ಗಳಿಸುವವನಹಿತರಲಿ ಧರ್ಮವನುಳಿದಧರ್ಮವನು
ಬಳಸುವವನೇಕಾಂತದಲ್ಲಿಗೆ
ಸುಳಿವವನು ಪಸಿವಿಲ್ಲದುಂಬುವ
ನಿಳೆಯೊಳಗೆ ಮೂಢಾತ್ಮನೈ ಧೃತರಾಷ್ಟ್ರ ಕೇಳೆಂದ ೫೨

ಬುಧರೊಳಗೆ ಪಗೆಗೊಳುವ ಬುಧರಂ
ನಿಧನಗೆಯ್ದಿಪ ಬುಧರನೇಳಿಪ
ಬುಧರ ಜರೆದೊಡೆ ನಲಿವ ಬುಧರಂ ಪೊಗಳ್ದರಂ ಪಳಿವ
ಬುಧರಸಧಮರ ಮಾಳ್ಪ ಬುಧರಂ
ವಿಧಿಗೊಳಿಪ ಬುಧರ್ಗೀವರಂ ಕವ
ರ್ವಧಮ ಭೂಪರಿಗಂಟದಿಹುದೆ ವಿನಾಶಕರವೆಂದ ೫೩

ಕುಸುಮ ಫಲ ತಾಂಬೂಲ ಗಂಧ
ಪ್ರಸರ ಭೋಜನ ಗಮನ ನೆನಹಿಂ
ದೆಸವ ಕಾರ್ಯದೊಳಿನಿಬರೊರಗಿದಡೊಬ್ಬನೆಚ್ಚರಿಕೆ
ಎಸೆಯಲನಿತುವನೊಬ್ಬನೇ ಭೋ
ಗಿಸುವಡವನೀಪಾಲರಿಗೆ ತಾ
ಪಸನವೆನಿಸದು ರಾಯ ಚಿತ್ತೈಸೆಂದನಾ ವಿದುರ ೫೪

೫೦. ದಾನ ಮಾಡದ ಹಣ, ವಿದ್ವಾಂಸರಿಗೆ ಮಾನ್ಯತೆ ಇಲ್ಲದ ರಾಜ್ಯ, ಶೀಲವಿಲ್ಲದ ಹೆಂಗಸು, ಜ್ಞಾನಿಯಿಲ್ಲದ ಸಭೆ, ಜ್ಞಾನವಿಲ್ಲದ ತಪಸ್ಸು, ವೇದಾಧ್ಯಯನವನ್ನು ಮಾಡದ ಬ್ರಾಹ್ಮಣ, ಬಾಣಗಳ ಹೊಡೆಯಿಲ್ಲದ ಯುದ್ಧ–ಇವುಗಳಿಗೆ ಯಾವ ಶೋಭೆಯೂ ಇಲ್ಲ.

೫೧. ಮಹಾರಾಜ, ಕಾಲವನ್ನು ವ್ಯರ್ಥವಾಗಿ ಕಳೆಯದೆ ಇಹಪರಗಳನ್ನು ಆಲೋಚಿಸಿ ನಡೆಯುವುದು, ದೇವರನ್ನೂ ಹಿರಿಯರನ್ನೂ ಸೇವಿಸುವುದು, ವಿದ್ವಾಂಸರು ಕೊಡುವ ಕಾಲೋಚಿತವಾದ ಸಲಹೆಯನ್ನು ಕೇಳಿ ತಾನೂ ವಿಚಾರಿಸುವುದು–ಇವು ಉತ್ತಮನ ಲಕ್ಷಣಗಳು.

೫೨. ಧೃತರಾಷ್ಟ್ರ, ನನಗೆ ಸಲಿಗೆಯಿದೆಯೆಂದು ಪರರ ಅಂತಃಪುರದಲ್ಲಿ ಸಂಚರಿಸತಕ್ಕವನು, ಆಪ್ತರನ್ನು ತೊರೆದು ಹೆಮ್ಮೆಯಿಂದ ನಡೆದುಕೊಳ್ಳತಕ್ಕವನು, ವೈರಿಗಳ ವಿಷಯದಲ್ಲಿ ಸಹ ಧರ್ಮವನ್ನು ಬಿಟ್ಟು ಅಧರ್ಮದಲ್ಲಿ ನಡೆಯುವವನು, ಇನ್ನೊಬ್ಬರ ಏಕಾಂತ ಸ್ಥಳಕ್ಕೆ ಹೋಗುವವನು, ಹಸಿವಿಲ್ಲದಿದ್ದರೂ ಊಟ ಮಾಡುವವನು– ಇವರು ಮೂಢಾತ್ಮರೆಂದು ತಿಳಿ.

೫೩. ವಿದ್ವಾಂಸರೊಡನೆ ವೈರವನ್ನು ಬೆಳಸುವುದು, ಅವರನ್ನು ಕೊಲ್ಲಿಸುವುದು, ನಿಂದಿಸುವುದು. ಅವರನ್ನು ಜರಿದರೆ ಸಂತೋಷಪಡುವುದು, ವಿದ್ವಾಂಸರನ್ನು ಯಾರು ಹೊಗಳುವರೋ ಅವರನ್ನು ನಿಂದಿಸುವುದು, ವಿದ್ವಾಂಸರನ್ನು ಅಧಮರಂತೆ ಕಾಣುವುದು, ಅವರಿಗೆ ಆಜ್ಞೆ ಮಾಡುವುದು, ವಿದ್ವಾಂಸರಿಗೆ ಸಂಮಾನವನ್ನು ಮಾಡತಕ್ಕವರನ್ನು ಆಸೂಯೆಯಿಂದ ಕಾಣುವುದು–ಇವುಗಳಿಂದ ರಾಜರಿಗೆ ಪಾಪವು ಅಂಟದಿದ್ದೀತೆ?

೫೪. ಹೂ, ಹಣ್ಣು, ತಾಂಬೂಲ ಗಂಧ, ಭೋಜನ-ಇವುಗಳ ಉಪಭೋಗ, ಸಂಚಾರ, ಸ್ಮರಣೆಯಿಂದ ಮಾಡಬೇಕಾದ ಕಾರ್ಯ, ನಿದ್ರಿಸದೆ ಎಚ್ಚರಿಕೆಯಿಂದಲೇ ಇದ್ದು ಸಾಧಿಸಬೇಕಾದ ಕಾರ್ಯ–ಇವುಗಳಲ್ಲಿ ಇನ್ನೊಬ್ಬರನ್ನು ಸೇರಿಸದೆ ಇರುವುದು ಯುಕ್ತವಲ್ಲ.

ಟಿಪ್ಪಣಿ ಇನಿಬರೂರಗಿದೊಡೊಬ್ಬನೆಚ್ಚರಿಕೆ = ಎಲ್ಲರೂ ಮಲಗಿದಾಗ ಒಬ್ಬನೇ ಎಚ್ಚರವಾಗಿ ಕುಳಿತಿರಬಾರದು–'ನೈಕಃ ಸುಪ್ತೇಷು ಜಾಗೃಯಾತ್' ಎಂಬ ಅಭಿಪ್ರಾಯವಿದ್ದರೂ ಇರಬಹುದು.

ಕಳಿದ ತರಣಿಯ ಕಿರಣದಲಿ ನಿ
ರ್ಮಲಿನ ಜಲದಲಿ ದುಗ್ಧ ಪಾನಂ
ಗಳಲಿ ವರ ಯುವತಿಯರ ಸಂಭೋಗಾಂತರಂಗದಲಿ
ತಳಿತ ಹೋಮದ ಹೊಗೆಗಳಲಿ ದಿನ
ಬಲದೊಳಾಯುಷ್ಯಾಭಿವೃದ್ಧಿಯ
ಬೆಳವಿಗೆಗಳಹವರಸ ಚಿತ್ತೈಸೆಂದನಾ ವಿದುರ ೫೫

ಎಳೆಯ ರವಿ ರಶ್ಮಿಯಲಿ ಪ್ರೇತಾಂ
ಗಳವ ಧೂಮ ಜ್ವಾಲೆಯಲಿ ಗಾ
ವಿಲ ವಯೋವೃದ್ಧೆಯರ ಸಂಭೋಗಾಂತರಂಗಳಲಿ
ಕೊಳಚೆ ನೀರಿನ ಬಳಕೆಯಲಿ ಕ
ತ್ತಲೆಯ ದಧ್ಯೋದನದಲಾಯುಷ
ವಿಳಿದು ಹೋಗದೆ ದಿನ ದಿನದೊಳವನೀಶ ಕೇಳೆಂದ ೫೬

ಮಸುಳಿಸಿದ್ದ ದುಕೂಲ ರದನದೊ
ಳೆಸೆವ ಸಾವಸೆ ಭುಕ್ತದುನ್ನತ
ದೆಸಕ ನಿಷ್ಠುರ ವಾಕ್ಯವುದಯಾಸ್ತಮಯ ಕಾಲದಲಿ
ಎಸೆವ ನಿದ್ರಾಂಗನೆಯೊಳೊಂದಿರೆ
ಬಿಸಜಲೋಚನನಾದೊಡೆಯು ವ
ರ್ಜಿಸುವಳವರನು ಭಾಗ್ಯಸಿರಿ ಭೂಪಾಲ ಕೇಳೆಂದ ೫೭

ಒಂದು ಮೊದಲಾರಂತ್ಯವಾದಾ
ಸಂದ ಪೂಗಫಲ ಕ್ರಮಂಗಳ
ಚಂದವನು ಚಿತ್ತೈಸು ಲಾಭಾಲಾಭ ಸುಖದುಃಖ
ಕುಂದದಿಹುದಾಯುಷ್ಯ ಮರಣವಿ
ದೆಂದು ತತ್ಕಾಲದಲಿ ಭೋಗಿಸು
ವಂದವನು ಚಿತ್ತೈಸುವುದು ತಾಂಬೂಲಧಾರಕರು ೫೮

ನಾಗವಲ್ಲಿಯ ಹಿಂದು ಮುಂದನು
ನೀಗಿ ಕಳೆಯದೆ ಚೂರ್ಣಪರ್ಣ
ತ್ಯಾಗವಿಲ್ಲದೆ ದಂತಧಾವನಪರ್ಣವನು ಸವಿದು
ಭೋಗಿಸುವೊಡಮರೇಂದ್ರನಾಗಲಿ
ನಾಗಭೂಷಣನಾದೊಡವನನು
ನೀಗಿ ಕಳೆವಳು ಭಾಗ್ಯವಧು ಭೂಪಾಲ ಕೇಳೆಂದ ೫೯

೫೫. ಸಾಯಂಕಾಲದ ಸೂರ್ಯಕಿರಣ, ಸ್ವಚ್ಛವಾದ ನೀರು, ಕ್ಷೀರಪಾನ, ಯುವತಿಯ ಸಂಭೋಗ, ಹೋಮದ ಹೊಗೆ–ಇವುಗಳಿಂದ ಆಯುಸ್ಸು ವರ್ಧಿಸುತ್ತದೆ.

೫೬. ಬೆಳಗಿನ ಸೂರ್ಯಕಿರಣ, ಸ್ಮಶಾನದ ಹೊಗೆ, ವೃದ್ಧಸ್ತ್ರೀಯರ ಸಂಭೋಗ, ಕೊಳಚೆ ನೀರು, ರಾತ್ರಿಯಲ್ಲಿ ಮೊಸರನ್ನದ ಭೋಜನ–ಇವುಗಳಿಂದ ಆಯುಸ್ಸು ಕ್ಷಯಿಸುತ್ತದೆ.

೫೭. ಕೊಳೆಯಾದ ಬಟ್ಟೆ, ಹಲ್ಲಿನಲ್ಲಿ ಕೊಳೆ, ಅತಿಯಾದ ಭೋಜನ, ನಿಷ್ಠುರವಾದ ನುಡಿ, ಸೂರ್ಯೋದಯ ಮತ್ತು ಸೂರ್ಯಾಸ್ತ ಕಾಲಗಳಲ್ಲಿ ನಿದ್ರಿಸುವುದು–ಇವುಗಳಿಂದ, ಮಹಾರಾಜ, ವಿಷ್ಣುವಾದರೂ ಸರಿಯೆ-ಅವನನ್ನು ಭಾಗ್ಯಲಕ್ಷ್ಮಿಯು ತ್ಯಜಿಸುವಳು.

೫೮. ತಾಂಬೂಲವನ್ನು ಸವಿಯುತಕ್ಕವರು ಎಷ್ಟು ಅಡಕೆಗಳನ್ನು ಉಪಯೋಗಿಸಿದರೆ ಯಾವ ಫಲ ದೊರಕುವುದೆಂಬುದನ್ನು ಕೇಳು: ಒಂದು ಅಡಕೆಯಿಂದ ಲಾಭ, ಎರಡರಿಂದ ನಷ್ಟ, ಮೂರರಿಂದ ಸುಖ, ನಾಲ್ಕರಿಂದ ದುಃಖ, ಐದರಿಂದ ಆಯುರ್ವೃದ್ಧಿ, ಆರರಿಂದ ಮರಣ! (ಅಡಕೆಗಳ ಸಂಖ್ಯೆ ಬೆಸವಾಗಿರಬೇಕೆಂದು ತಾತ್ಪರ್ಯ).

೫೯. ತಾಂಬೂಲವನ್ನು ಹಾಕಿಕೊಳ್ಳುವಾಗ ವೀಳ್ಯದೆಲೆಯ ಹಿಂದು ಮುಂದನ್ನು ನೀಗಿ ಕಳೆಯಬೇಕು. ಹರಕು ಎಲೆಯನ್ನು ವರ್ಜಿಸಬೇಕು. ಮಾವಿನ ಎಲೆ ಮುಂತಾದ್ದರಿಂದ ಹಲ್ಲನ್ನು ಉಜ್ಜುವಾಗ ಎಲೆಯನ್ನು ಅಗಿಯಬಾರದು. ಇದಕ್ಕೆ ವ್ಯತಿರಿಕ್ತವಾಗಿ ನಡೆದರೆ ದೇವೇಂದ್ರನಾಗಲಿ ಈಶ್ವರನೇ ಆಗಲಿ ಭಾಗ್ಯಲಕ್ಷ್ಮಿಯು ಅವನನ್ನು ತ್ಯಜಿಸುವಳು.

ಸ್ಥಾನಪಂಚಕದಿಂದ್ರಿಯದ ಸಂ
ಸ್ಥಾನದಲಿ ನಿದ್ರಾಂಗನೆಯ ಸ
ನ್ಮಾನಿಸುವೊಡಾ ಸಾಧನದ ಪಂಚಕದ ಪರಿವಿಡಿಯ
ಸ್ಥಾನವರಿದಾರೋಗಣೆಯ ಸಂ
ಧಾನದಲಿ ಚಿತ್ತೈಸುವುದು ರಾ
ಜಾನುಮತವಿದು ಸಕಲ ಸುಖಕರವೆಂದನಾ ವಿದುರ ೬೦

ಜನಜನಿತ ಮಲ ಮೂತ್ರ ಮೂರಾ
ರೆನಿಸುವುದು ರತಿಯೊಂದು ನಿಜ ಭೋ
ಜನವೆರಡು ಸುಯಿಲೊಂದು ವರ ತಾಂಬೂಲ ಹದಿನೈದು
ಇನಿತುವನು ತಪ್ಪದೆ ನಡೆಸಲಾ
ಜನಪನಾರೋಗಣೆಗೆ ಸುಖ ಸಂ
ಜನಿಸುವುದು ದಿನಚರಿಯದಿಂದವನೀಶ ಕೇಳೆಂದ ೬೧

ನೆರವ ಸಚರಾಚರವಿದೆಲ್ಲವು
ನರರ ನಿಜಭೋಜನಕೆ ಜನಿಸಿದ
ವರಸ ಕೇಳಿದರೊಳಗೆ ಭೋಜ್ಯಾಭೋಜ್ಯವನು ತಿಳಿದು
ಪರಿಹರಿಸ ಬಲ್ಲವರುಗಳು ಘನ
ತರದ ಸುಕೃತವನೈದುವವರು ಭೂ
ವರರೊಳಗೆ ಸಂದೇಹವೇ ಭೂಪಾಲ ಕೇಳೆಂದ ೬೨

ತುರುಗಪ್ಪುದಯ ಧ್ವನಿಯ ಸಿಡಿಲಿನ
ಧರಧುರದ ಗರ್ಜನೆಯ ಸಾರಿಯ
ರಿರವ ಪುರುಷನ ಭಾಗ್ಯದೇವತೆಯೊಲಿವ ಕಾಲವನು
ವರುಷಮುದಯುವ ಬರನ ಬರವನು
ವಿರಚಿಸುವೊಡೆ ವಿಧಾತೃಗಳವ
[illegible] ಕೇಳ್ ಮಾನವರಿಗಿದು ಗೋಚರಿಸಲರಿದೆಂದ ೬೩

ಒಪತನಗಳಪಸಿದೊಡೆ ಬಂಧುಗ
ಳಿವಯ ಕಾಣರು ಭಂಟ ತಾನಾ
ದೊಡೆಯು ಬಂದಾಪತ್ತಿನೊಳಗೆ ಪರಾಙ್ಮುಖನಯಾಗಿ
ಸುಖಿಸಿದವನಿ: ಪಗ ಪರೀರಮೊ
ಳಪಸಿದಾ ದು ಬಾಧೆಗವನಿಯು
ನತಮುರಂಗಳು ರಕ್ಷಿಸವು ಕೇಳೆಂದನಾ ವಿದುರ ೬೪

೬೦. ಮಹಾರಾಜ, ನಿದ್ರೆ ಬರುವುದಿಲ್ಲವೆಂದು ಹೇಳಿದೆಯಲ್ಲ! ಶಬ್ದ, ಸ್ಪರ್ಶ, ರೂಪ, ರಸ, ಗಂಧವೆಂಬ ಐದು ವಿಷಯಗಳಲ್ಲಿ ಶ್ರೋತ್ರಾದಿ ಪಂಚೇಂದ್ರಿಯಗಳು ಪ್ರವೃತ್ತ ವಾಗಿರುತ್ತವೆ. ಈ ಸಂದರ್ಭದಲ್ಲಿ ನಿದ್ರಾಂಗನೆಯನ್ನು ಒಲಿಸಿಕೊಳ್ಳಬೇಕಾದರೆ, ಪಂಚೇಂದ್ರಿಯ ಗಳ ಪ್ರವೃತ್ತಿಗೆ ಮೂಲ ಸ್ಥಾನವಾಗಿರುವ ಆತ್ಮನಿಗೆ, ಆ ಪ್ರವೃತ್ತಿಗಳನ್ನು ಆರೋಗಣೆಯ ಬುದ್ಧಿಯಿಂದ ಅರ್ಪಿಸಬೇಕು. ಈ ಬಗೆಯ ದಿನಚರ್ಯೆಯಿಂದ ನಿದ್ರಾಸುಖವು ಲಭಿಸುವುದು

೬೧. ಮಹಾರಾಜ, ರಾಜನ ಆರೋಗ್ಯವು ಉತ್ತಮವಾಗಿದ್ದು ಸುಖವಾಗಿರ ಬೇಕಾದರೆ ಅವನ ದಿನಚರಿಯಲ್ಲಿ ಈ ರೀತಿಯಾದ ವಿಧಾನವಿರಬೇಕು: ದಿನದಲ್ಲಿ ಮೂರು ಸಲ ಮಲವಿಸರ್ಜನೆ, ಆರು ಸಲ ಮೂತ್ರವಿಸರ್ಜನೆ, ಒಂದು ಸಲ ರತಿ, ಎರಡು ಸಲ ಭೋಜನ, ಒಂದು ಸಲ ನಿದ್ರೆ, ಹದಿನೈದು ಸಲ ತಾಂಬೂಲ ಚರ್ವಣ.

೬೨. ಈ ಚರಾಚರ ವಸ್ತುಗಳೆಲ್ಲವೂ ಜನರ ಭೋಗಕ್ಕೆ ಅರ್ಹವಾಗಿ ಜನಿಸಿವೆ. ಆದರೆ ಯಾವುದು ಯಾರಿಗೆ ಯಾವ ಪ್ರಕಾರದಲ್ಲಿ ಭೋಗ್ಯ, ಯಾವುದು ಯಾರಿಗೆ ಯಾವ ಪ್ರಕಾರದಲ್ಲಿ ಭೋಗ್ಯವಲ್ಲ–ಎಂಬುದನ್ನು ತಿಳಿದು ಭೋಗ್ಯವಲ್ಲದ್ದನ್ನು ತ್ಯಜಿಸತಕ್ಕ ರಾಜರು ಅಧಿಕವಾದ ಪುಣ್ಯವನ್ನು ಪಡೆಯುತ್ತಾರೆ.

೬೩. ಕುದುರೆಯ ಅಭಿಪ್ರಾಯವನ್ನೂ ಸಿಡಿಲಿನ ಗರ್ಜನೆಯನ್ನೂ ಹೆಂಗಸರ ಹೃದಯವನ್ನೂ ಪುರುಷನಿಗೆ ಭಾಗ್ಯೋದಯವಾಗುವ ಸಮಯವನ್ನೂ ಮಳೆ ಬರುವ ಕಾಲವನ್ನೂ ಕ್ಷಾಮವು ಬರುವುದನ್ನೂ ತಿಳಿಯಲು ದೇವತೆಗಳಿಗೂ ಶಕ್ಯವಿಲ್ಲ. ಇದು ಮಾನವರಿಗೆ ತಿಳಿದೀತೆ?

೬೪. ಧೃತರಾಷ್ಟ್ರ, ಮನುಷ್ಯನಿಗೆ ಹಸಿವಾದಾಗ ಅಥವಾ ರೋಗವು ಬಂದಾಗ, ಅಡವಿಯಲ್ಲಿರುವ ಗಿಡಮರಗಳೂ ಸಹ ನೆರವಿಗೆ ಬರುತ್ತವೆ. ಹೀಗಿರುವಾಗ ಬಡತನದಲ್ಲಿ ನೆರವಿಗೆ ಬರದಿರುವವರನ್ನು ಬಂಧುಗಳೆನ್ನಬಹುದೆ? ಆಪತ್ತಿನಲ್ಲಿ ಕೈಬಿಡದೆ ಸಹಾಯ ಮಾಡುವವರನ್ನು ಭಂಟರೆನ್ನಬಹುದೆ? ಅಂತಹ ಬಂಧುಗಳನ್ನೂ [illegible] ತಿಳಿಯಬೇಕು.

ಕಾಲದೊಳಗೆ ವಸಂತ ವಿದ್ಯಾ
ಜಾಲದೊಳಗೆ ಕವಿತ್ವ ಗಜವೈ
ಹಾಳಿಯಲಿ ದೇವೇಂದ್ರ ಮಿತ್ರಶ್ರೇಣಿಯೊಳು ವಾಣಿ
ಭಾಳನೇತ್ರನು ದೈವದಲಿ ಬಿ
ಲ್ಲಾಳಿನಲಿ ಮನ್ಮಥನು ಧನದಲಿ
ಹೇಳಲೇನಭಿಮಾನವೇ ಧನವೆಂದನಾ ವಿದುರ ೬೫

ಮುಂದೆ ಗುರುವನು ಬಂಧುಜನವನು
ಹಿಂದೆ ಕರ್ಮಾಂತ್ಯದಲಿ ಸೇವಕ
ವೃಂದವನು ಕೊಂಡಾಡುವುದು ಸಾಹಿತ್ಯ ಭಾವವಿದು
ಹಿಂದು ಮುಂದಾವಾಗ ನಿನ್ನಯ
ನಂದನರ ನಾರಿಯರ ಹೊಗಳುವು
ದಂದವೇ ಭೂಪಾಲ ಚಿತ್ತೈಸೆಂದನಾ ವಿದುರ ೬೬

ತುರಗದೆಡಬಲ ಗಜದ ಸಮ್ಮುಖ
ತರುಣಿಯರುಗಳ ಸರ್ವತೋಮುಖ
ಹಿರಿದು ದುರ್ಜನನಿದ್ದ ದೇಶವದೆಯ್ದೆ ವ್ಯಾಘ್ರಮುಖ
ಭರದಿನಾ ದೇಶವನು ಬಿಟ್ಟರ
ವರಿಸದನ್ಯಗ್ರಾಮಗಳ ವನಾಂ
ತರವನೈದುವುದಲ್ಲದಲ್ಲಿ ಹುದುಚಿತವಲ್ಲೆಂದ ೬೭

ಎತ್ತಲೆತ್ತಲು ಪೋಪ ಮನುಜಂ
ಗತ್ತಲತ್ತಲೆ ದೈವ ಕೂಡೆ ಬ
ರುತ್ತಿಹುದು ಬೆಂಬಿಡದೆ ನಾನಾ ದೇಶ ದೇಶದಲಿ
ಮಿತ್ರನುರು ಮಧ್ಯಸ್ಥ ಪುರುಷನ
ಮಿತ್ರನೌದಾಸೀನನೊಬ್ಬನು
ಕೃತ್ರಿಮನು ಸಹಜೀವಿಯಂತಿವರರಸ ಕೇಳೆಂದ ೬೮

ಗುರು ವಿರೋಧ ಮಹೀಬುಧರ ಮ
ತ್ಸರವು ದೈವದ್ರೋಹ ಗುಣ ಸಾ
ಗರನ ಬಂಧು ದ್ವೇಷಪತ್ನಾಲೀಢ ದೀನತನ
ಶರಣಜನ ಪಾಂಡಿತ್ಯವೆಂಬಿವ
ನರವರಿಸದಂಗೈಸೆ ಭೂಪನ
ಸಿರಿಗೆ ಮೊಳೆಯದೆ ಕೇಡು ಚಿತ್ತೈಸೆಂದನಾ ವಿದುರ ೬೯

೬೫. ಕಾಲದಲ್ಲಿ ವಸಂತನೂ ವಿದ್ಯೆಯಲ್ಲಿ ಕವಿತ್ವವೂ ಗಜಾರೋಹಣ ವೈಭವವುಳ್ಳವರಲ್ಲಿ ದೇವೇಂದ್ರನೂ ಮಿತ್ರರಲ್ಲಿ ವಾಣಿಯೂ ದೇವರಲ್ಲಿ ಶಿವನೂ ಬಿಲ್ಲಾಳುಗಳಲ್ಲಿ ಮನ್ಮಥನೂ ಧನದಲ್ಲಿ ಅಭಿಮಾನವೂ ಹೆಚ್ಚಿನವು.

೬೬. ಗುರುಹಿರಿಯರನ್ನೂ ಬಂಧುಗಳನ್ನೂ ಎದುರಿಗೆ ಮೊದಲು ಹೊಗಳಬೇಕು. ಕಾರ್ಯವು ನಡೆದ ಮೇಲೆ ಸೇವಕರನ್ನು ಹೊಗಳಬೇಕು. ಇದು ನೀತಿ. ಮಕ್ಕಳನ್ನೂ ಹೆಂಡತಿಯರನ್ನೂ ಯಾವ ಸಂದರ್ಭದಲ್ಲಿಯೂ ಹೊಗಳಬಾರದು.

೬೭. ಕುದುರೆಯ ಪಕ್ಕದಲ್ಲಿಯೂ ಆನೆಯ ಎದುರಿಗೂ ಹೋಗಬಾರದು. ತರುಣಿಯರ ಸಮೀಪದಲ್ಲಿ ಸುಳಿಯಬಾರದು. ದುರ್ಜನರು ಇರುವ ಸ್ಥಳವಂತೂ ಹುಲಿಯು ಇದ್ದ ಸ್ಥಳದಂತೆ. ದುರ್ಜನರಿರುವ ಊರನ್ನೇ ಬಿಟ್ಟು ಬೇರೆ ಊರಿಗೆ ಹೊರಟುಹೋಗಬೇಕು. ಕಾಡಿಗೆ ಹೊದರೂ ಚಿಂತೆಯಿಲ್ಲ, ಅಲ್ಲಿರಬಾರದು.

೬೮. ಮಹಾರಾಜ, ಮನುಷ್ಯನು ಎಲ್ಲಿ ಹೋದರೂ ಅವನ ದೈವವು ಬೆಂಬಿಡದೆ ಬಂದೇ ತೀರುವುದು. ಎಲ್ಲಿದ್ದರೂ ಮನುಷ್ಯನಿಗೆ ಸ್ನೇಹಿತ, ಮಧ್ಯಸ್ಥ, ಶತ್ರು–ಎಂಬ ಮೂವರ ಸಂಬಂಧ ಆಗಿಯೇ ತೀರುತ್ತದೆ.

೬೯. ಗುರುಹಿರಿಯರೊಡನೆ ವಿರೋಧ, ಬ್ರಾಹ್ಮಣರಲ್ಲಿ ದ್ವೇಷ, ದೈವ ದ್ರೋಹ, ಗುಣವಂತರಾದ ಬಂಧುಗಳೊಡನೆ ಹಗೆತನ, ಅತಿಯಾದ ದೈನ್ಯ, ಶರಣಾಗತರಲ್ಲಿ ತನ್ನ ಬುದ್ಧಿವಂತಿಕೆಯ ಪ್ರದರ್ಶನ–ಇವು ದೊರೆಯ ಸಿರಿತನವನ್ನು ಹೋಗಲಾಡಿಸುತ್ತವೆ.

ಬಲು ಪ್ರಧಾನನ ವೈರ ಹಿತವಹ
ಲಲನೆಯರ ಮನದಳಲು ಹಗೆಯಲಿ
ಬಳಸುವಂತಸ್ಥತೆಯನಾಮಿಕರೊಡನೆ ಕೆಳೆಗೋಷ್ಠಿ
ಬಲದೊಡನೆ ನಿರ್ಬಂಧ ಧರ್ಮದ
ನೆಲೆಯನರಿಯದ ದಾನಿಗಳ ಸಿರಿ
ಸುಳಿವ ಗಾಳಿಗೆ ಮಲೆವ ದೀಪವು ಕೇಳು ಧೃತರಾಷ್ಟ್ರ ೭೦

ಹುಸಿ ಪರದ್ರೋಹವು ಪರ ಸ್ತ್ರೀ
ವ್ಯಸನ ಪೇಯವಸೂಯೆ ಮಾನ್ಯ
ದ್ವಿಷತೆ ಪತಿತ ಸಮೇತವಾತ್ಮಸ್ತುತಿಯೆನಿಪ್ಪಿವನು
ಬಿಸುಟು ತದ್ವಿಪರೀತದಲಿ ವ
ರ್ತಿಸುವನವನೇ ರಾಯನಾತಗೆ
ವಸುಧೆಯೊಳಗೆಣೆ ಯಾವನೈ ಭೂಪಾಲ ಕೇಳೆಂದ ೭೧

ಇದು ಸಮಾಹಿತವಿದು ಶುಭೋದಯ
ವಿದು ಸಕಲಪುರುಷಾರ್ಥ ಸಾಧನ
ವಿದು ಸುಜನ ಸನ್ಮಾನವಿದು ಸಂಸಾರಸೌಖ್ಯ ಫಲ
ಇದು ಸುಬಲವಿದಬಲವಿದಾಮ್ನಾ
ಯದ ಸುನಿಶ್ಚಯ ನೀತಿ ಕಾರ್ಯದ
ಹದನನರಿದಾಚರಿಸಬಲ್ಲವನವನೆ ಪಂಡಿತನು ೭೨

ಶತ್ರುಕಾಲ ಸುದೇಶ ವರ್ಗ ಸು
ಮಿತ್ರರುದಯೋಪಾಯಕರಣ ಸು
ಪಾತ್ರವೆಂಬಿವು ಮೂರು ತೆರನಾಗಿಪ್ಪವಿವರೊಳಗೆ
ಕ್ಷತ್ರಧರ್ಮ ವಿವೇಕವೆಂಬಿವ
ನ್ನೋತ್ರಗೊಳಿಪನೆ ರಾಯನವಗೆ ಧ
ರಿತ್ರಿ ಯೊಳಗೆಣೆ ಯಾವನೈ ಭೂಪಾಲ ಕೇಳೆಂದ ೭೩

ಎಲ್ಲಿ ಸುಲಲಿತ ವಿದ್ಯೆ ಬಹು ಗುಣ
ವೆಲ್ಲಿ ಗಣಿಕಾನಿಕರ ಮಣಿಗಣ
ವಲ್ಲಿ ಗಜ ಜಾತ್ಯಶ್ವವೆಲ್ಲಿ ವರೂಥ ಸಂದೋಹ
ಎಲ್ಲಿ ಸುಭಟನಿಕಾಯ ನೆರೆದಿಹು
ದಲ್ಲಿ ತನ್ನಾಧೀನ ಮಾಡಲು
ಬಲ್ಲವನೆ ನೃಪನಾತಗಿದಿರಾರೈ ಧರಿತ್ರಿಯಲಿ ೭೪

೨೦. ಧೃತರಾಷ್ಟ್ರ, ದೊಡ್ಡವರೊಡನೆ ಹಗೆತನ, ಹಿತವನ್ನು ಕೋರುವ ಹೆಂಗಸರ ಮನಸ್ಸಿಗೆ ದುಃಖವುಂಟಾಗುವಂತೆ ನಡೆದುಕೊಳ್ಳುವುದು, ಶತ್ರುಗಳಲ್ಲಿ ಮೃದುವಾಗಿ ವರ್ತಿಸುವುದು, ಕೀಳುಜನರೊಡನೆ ಸ್ನೇಹ, ಸೈನಿಕರನ್ನು ಪೀಡಿಸುವುದು, ಧರ್ಮದ ನೆಲೆಯನ್ನರಿಯದೆ ತೋರಿದಂತೆ ದಾನ ಮಾಡುವುದು–ಇವುಗಳಿದ್ದರೆ ಬಿರುಗಾಳಿಗೆ ಸಿಕ್ಕಿದ ದೀಪದಂತೆ ಮನುಷ್ಯನು ಹಾಳಾಗುತ್ತಾನೆ.

೨೧. ಸುಳ್ಳು, ಪರದ್ರೋಹ, ಪರಸ್ತ್ರೀ ವ್ಯಸನ, ಕುಡಿತ, ಹೊಟ್ಟೆ ಕಿಚ್ಚು, ನೀಚರ ಸಹವಾಸ, ಆತ್ಮಸ್ತುತಿ–ಇವುಗಳನ್ನು ಬಿಟ್ಟು, ಸತ್ಯ, ಪರೋಪಕಾರ ಮುಂತಾದ ಉತ್ತಮವಾದ ಗುಣಗಳನ್ನು ಬೆಳೆಸಿಕೊಂಡವನೇ ರಾಜ ನೆನಿಸಲು ಅರ್ಹನಾಗುತ್ತಾನೆ. ಈ ಜಗತ್ತಿನಲ್ಲಿ ಅಂಥವರಿಗೆ ಸಮಾನರು ಯಾರಿದ್ದಾರೆ?

೨೨. ಯಾವುದು ನ್ಯಾಯವಾದದ್ದು, ಯಾವುದರಿಂದ ಶುಭವಾಗುತ್ತದೆ, ಯಾವುದು ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ಪುರುಷಾರ್ಥಗಳಿಗೆ ಸಾಧನವಾಗಿದೆ, ಯಾವುದನ್ನು ಸಜ್ಜನರು ಮೆಚ್ಚುತ್ತಾರೆ, ಯಾವುದರಿಂದ ಸಂಸಾರದಲ್ಲಿ ಸೌಖ್ಯ ಉಂಟಾಗುವುದು, ಯಾವುದು ಪ್ರಬಲವಾದದ್ದು, ಯಾವುದು ದುರ್ಬಲ, ಯಾವುದು ಶಾಸ್ತ್ರಸಂಮತವಾದದ್ದು–ಎಂದು ವಿಮರ್ಶಿಸಿ ಕಾರ್ಯನೀತಿಯನ್ನು ನಿಶ್ಚಯಿಸತಕ್ಕವನೇ ಪಂಡಿತನೆನಿಸುತ್ತಾನೆ.

೨೩. ಶತ್ರು, ಮಿತ್ರ, ದೇಶ, ಕಾಲ, ಏಳಿಗೆ ಉಪಾಯ, ಪಾತ್ರ–ಇವುಗಳಲ್ಲಿ ಉತ್ತಮ ಮಧ್ಯಮ ಕನಿಷ್ಠ ಎಂದು ಮೂರು ಬಗೆಗಳು ಇದ್ದೇ ಇರುತ್ತವೆ. ಇವುಗಳನ್ನು ವಿವೇಕದಿಂದ ವಿಚಾರಿಸಿ ತಕ್ಕಂತೆ ನಡೆಯತಕ್ಕವನೇ ಶ್ರೇಷ್ಠನು.

೨೪. ಉತ್ತಮವಾದ ವಿದ್ಯೆ, ಉತ್ತಮ ಗುಣಗಳು, ಗಣಿಕೆಯರು ರತ್ನಗಳು, ಆನೆಗಳು, ಜಾತಿಯ ಕುದುರೆಗಳು, ರಥ, ಶಿಸ್ತಿನ ವೀರಸೈನಿಕರು– ಇವು ಎಲ್ಲಿ ಇವೆಯೆಂದು ಹುಡುಕಿ ಶೋಧಿಸಿ ತನ್ನವುಗಳನ್ನಾಗಿ ಮಾಡಿಕೊಳ್ಳ ಬಲ್ಲವನು ಶ್ರೇಷ್ಠನಾದ ರಾಜ.

ದ್ವಾರವೊಂಬತ್ತಿಂದ್ರಿಯದಹಂ
ಕಾರಕರಣ ಚತುಷ್ಟಯಂಗಳ
ಸಾರಭೂತಾಧಿಕದ ಸುಳಿವಿನ ಪಂಚವಾಯುಗಳ
ಹೋರಟೆಗಳಲಿ ಬಳಲಿ ಜೀವನ
ಧೀರನಹವೊಲು ಪಾಂಡು ಪುತ್ರರ
ಕೌರವರ ಬೇಳಂಬದಲಿ ಬೆಂಡಾದೆ ನೀನೆಂದ ೭೫

ಮತ್ತನತಿಶ್ರಾಂತನು ಪ್ರಮದೋ
ನ್ಮತ್ತನತಿಕುಪಿತಾನನನು ಚಲ
ಚಿತ್ತನತಿಕಾಮುಕನು ಲುಬ್ಧನು ಶೂರನೆಂಬವನು
ಕ್ಷುತ್ತು ಘನವಾಗುಳ್ಳನಿಂತೀ
ಹತ್ತು ಜನವಾವಾಗ ಧರ್ಮದ
ತತ್ತ್ವಣೆಗಳನರಿಯರೈ ಭೂಪಾಲ ಕೇಳೆಂದ ೭೬

ದಾನವಿಷ್ಟಾಪೂರ್ತ ವಿನಯ ಸ
ಮಾನ ದೇವಾರ್ಚನೆ ಮಹೀಸುರ
ಧೇನು ಸಂತರ್ಪಣ ಮಹಾತಿಥಿಪೂಜೆ ಗುರುಭಕ್ತಿ
ಧ್ಯಾನ ದೀನಾನಾಥಬಂಧು ವಿ
ತಾನ ಶರಣಾಗತ ಸುರಕ್ಷಾ
ಸ್ನಾನತೀರ್ಥಂಗಳನು ಮಾಡಲು ಬೇಹುದವನಿಪರು ೭೭

ಧರೆಯೊಳೀ ಹೊತ್ತಿನಲಿ ನಿನಗೈ
ಶ್ವರಿಯದಲಿ ಮಕ್ಕಳಲಿ ಖಂಡೆಯ
ಸಿರಿಯಲೊಡಹುಟ್ಟಿದರು ಸಪ್ತಾಂಗದಲಿ ಸತಿಯರಲಿ
ಗುರು ಪಿತಾಮಹ ಬಂಧುಜನ ಮಿ
ತ್ರರಲದಾವುದು ಕೊರತೆ ಕೌಂತೇ
ಯರ ನೆರವಿಗರ ಮಾಡುವರೆ ಧೃತರಾಷ್ಟ್ರ ಕೇಳೆಂದ ೭೮

ಉಭಯಕುಲಶುದ್ಧಿಯಲಿ ಹೆಚ್ಚಿದ
ವಿಭವದಲಿ ವಿಗ್ರಹದಲಧಿಕ
ಪ್ರಭೆಗಳಲಿ ಸತ್ಯದಲಿ ಸಾಹಿತ್ಯದಲಿ ವಿನಯದಲಿ
ಅಭವನಂಘ್ರಿಯ ಸೇವೆಯಲಿ ಹರಿ
ನಿಭನೆನಿಸಿ ಬದುಕುವನು ರಾಜ್ಯಕೆ
ವಿಭುವೆನಿಸುವನು ರಾಯ ಚಿತ್ತೈಸೆಂದನಾ ವಿದುರ ೭೯

೭೫. ಧೃತರಾಷ್ಟ್ರ, ಮನುಷ್ಯನ ದೇಹದಲ್ಲಿ ಒಂಬತ್ತು ರಂಧ್ರಗಳು, ಐದು ಇಂದ್ರಿಯಗಳು, ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳೆಂಬ ನಾಲ್ಕು ಕರಣಗಳೂ ಇವೆ. ಅಲ್ಲದೆ ಪಂಚಭೂತಗಳು ಪಂಚವಾಯುಗಳು ಸೇರಿಕೊಂಡಿವೆ. ಇಂತಹ ದೇಹದಲ್ಲಿರುವ ಜೀವಾತ್ಮನು ಅವುಗಳ ಘರ್ಷಣೆಯಲ್ಲಿ ಸಿಕ್ಕಿ ಆಯಾಸಪಡುತ್ತಿದ್ದಾನೆ. ಹಾಗೆಯೇ ನೀನು ಪಾಂಡವ ಕೌರವರ ಜಗಳದಲ್ಲಿ ಸಿಕ್ಕಿ ಬಳಲಿ ಬೆಂಡಾಗಿದ್ದೀಯೆ!

೭೬. ಹತ್ತು ಜನರಿಗೆ ಧರ್ಮಾಧರ್ಮಗಳ ಪರಿವೆ ಇರುವುದಿಲ್ಲ. ಅವರು ಯಾರೆಂದರೆ : ಮದ್ಯಪಾನದಿಂದ ಮದಿಸಿದವನು. ಬಳಲಿದವನು, ಅಹಂಕಾರಿ, ಹುಚ್ಚ, ಕೋಪಗೊಂಡವನು, ಚಂಚಲಬುದ್ಧಿಯವನು, ಕಾಮುಕ, ಲೋಭಿ, ಶೂರ ಮತ್ತು ಹಸಿದವನು.

೭೭. ಪಾತ್ರವನ್ನರಿತು ದಾನ ಮಾಡುವುದು, ಕೆರೆಕಟ್ಟೆಗಳನ್ನು ನಿರ್ಮಿಸುವುದು ಮುಂತಾದ ಪರೋಪಕಾರದ ಕೆಲಸ, ವಿನಯ, ಆತ್ಮಾಭಿಮಾನ, ದೇವತಾರ್ಚನೆ, ಬ್ರಾಹ್ಮಣ ಮತ್ತು ಗೋವುಗಳಿಗೆ ಸತ್ಕಾರ, ಅತಿಥಿ ಪೂಜೆ, ಗುರುಭಕ್ತಿ, ಧ್ಯಾನ, ದೀನರು ಅನಾಥರು ಮತ್ತು ಬಂಧುಗಳಿಗೆ ನೆರವು, ಶರಣಾಗತರನ್ನು ರಕ್ಷಿಸುವುದು, ತೀರ್ಥಸ್ನಾನ–ಇವುಗಳಲ್ಲಿ ರಾಜನು ಆಸಕ್ತನಾಗಿರಬೇಕು.

೭೮. ಮಹಾರಾಜ, ನಿನಗೆ ಈಗ ಯಾವುದಕ್ಕೆ ಕೊರತೆ ಇದೆ? ಐಶ್ವರ್ಯ, ಮಕ್ಕಳು, ವಿಜಯಲಕ್ಷ್ಮಿ, ಸೋದರರು, ಅಮಾತ್ಯ ಭಂಡಾರ ಮುಂತಾದ ಸಪ್ತಾಂಗಗಳು. ಪತ್ನಿ, ಗುರು, ಪಿತಾಮಹ, ಬಂಧುಬಳಗ, ಮಿತ್ರರು–ಈ ಯಾವ ವಿಷಯಗಳಲ್ಲಿಯೂ ಕೊರತೆ ಇಲ್ಲ. ಹೀಗಿರುವಾಗ ಪಾಂಡವರನ್ನು ಅನ್ಯರೆಂದು ಬಗೆದು ದಿಕ್ಕಿಲ್ಲದವರನ್ನಾಗಿ ಮಾಡಬಹುದೆ?

೭೯. ತಂದೆತಾಯಿಗಳ ವಂಶಕ್ಕೆ ಕೀರ್ತಿಯನ್ನು ತಂದು ವೈಭವದಿಂದ ಬಾಳುತ್ತ ರಣರಂಗದಲ್ಲಿ ಶೂರನೆನಿಸಿ, ಸತ್ಯ ಸಾಹಿತ್ಯ ವಿನಯಗಳಲ್ಲಿ ಗಟ್ಟಿಗನೆನಿಸಿ, ಭಗವಂತನ ಸೇವೆಯಲ್ಲಿ ನಿಷ್ಠನಾಗಿ ದೇವೇಂದ್ರನಂತೆ ಬಾಳತಕ್ಕವನು ರಾಜ್ಯದ ಒಡೆಯನಾಗಲು ಅರ್ಹನು.

ಟಿಪ್ಪಣಿ ಚಲಚಿತ್ತ, ಶೂರ ಎಂಬಿವಕ್ಕೆ ಬದಲಾಗಿ ಸಂಸ್ಕೃತಮೂಲದಲ್ಲಿ ಭೀತ, ತ್ವರಮಾಣ ಎಂದಿವೆ. ಹೆದರಿದವನು. (ವಿಚಾರ ಮಾಡದೆ) ತ್ವರೆಯಿಂದ ಕೆಲಸ ಮಾಡತಕ್ಕವನು ಎಂದು ಆ ಶಬ್ದಗಳಿಗೆ ಅರ್ಥವಾಗುತ್ತದೆ.

ವೇಸಿಯಹ ಪರಿಯಂಕದಲಿ ನಿಜ
ದಾಸಿಯಹ ಶುಶ್ರೂಷೆಯಲಿ ನಿ
ರ್ದೋಷಿಯಹ ಪತಿಭಕ್ತಿಯಲಿ ಮೋಹದಲಿ ತಾಯೆನಿಸಿ
ಏಸು ಕಾರ್ಯಕೆ ಮಂತ್ರಿಯೆನಿಸುವ
ಮೈಸಿರಿಯನುಳ್ಳವಳು ರಾಣೀ
ವಾಸವೆಂದೆನಿಸುವಳಲೈ ಭೂಪಾಲ ಕೇಳೆಂದ ೮೦

ತಂದೆ ತಾಯಿಗಳಾಜ್ಞೆಯನು ಸಾ
ನಂದದಲಿ ಪಾಲಿಸುತ ಮದವನು
ಮುಂದುಗೆಡಿಸಿ ಸುಧರ್ಮದಲಿ ರಾಜ್ಯವನು ಪಾಲಿಸುತ
ಬಂಧುಬಳಗವ ಸಲಹಿ ಭೂಸುರ
ವೃಂದವನು ನೆರೆ ಹೊರೆವಡೆವ ಸುತ
ವಂದ್ಯನೈ ಲೋಕಕ್ಕೆ ಚಿತ್ತೈಸೆಂದನಾ ವಿದುರ ೮೧

ಇಹಪರದ ಸುಖಸಂಗತಿಯ ಸಂ
ಗ್ರಹಿಸಿ ವೇದಾಚಾರದಲಿ ಸ
ನ್ನಿಹಿತನಾಗಿ ಸಮಸ್ತ ಕಳೆಯಲಭಿಜ್ಞನೆಂದೆನಿಸಿ
ಅಹಿತಕುಲವನು ಸಮರದಲಿ ನಿ
ರ್ವಹಿಸಿ ಶರಣಾಗತರ ಪಾಲಿಸು
ತಿಹಡವನು ಮಗನೆನಿಸುವನು ಭೂಪಾಲ ಕೇಳೆಂದ ೮೨

ಇಂದ್ರಿಯವನೊಡೆತುಳಿದು ಕರ್ಮದ
ಬಂದಿಯನು ತಲೆಬಳಚಿ ವಿಷಯದ
ದಂದುಗವನೀಡಾಡಿ ಮಾಯಾಪಾಶವನು ಹರಿದು
ದ್ವಂದ್ವವಿರಹಿತನಾಗಿ ವಿಶ್ವದ
ಲೊಂದಿ ಮೆರೆಯಲು ಬಲ್ಲವನು ಗುರು
ವೆಂದೆನಿಸುವನು ರಾಯ ಚಿತ್ತೈಸೆಂದನಾ ವಿದುರ ೮೩

ಒಡಲೊಡವೆ ಮೊದಲಾದುವೆಲ್ಲವ
ತಡೆಯದೊಪ್ಪಿಸಿ ಗುರುವಿನಂಘ್ರಿಯ
ಹಿಡಿದು ಭಜಿಸುತ ಕೊಟ್ಟ ಕೆಲಸಂಗಳೊಳಗನಿತುವನು
ಬಿಡದೆ ಮಾರುತ್ತರವನವರಿಗೆ
ಕೊಡದೆ ಭಯಭಕ್ತಿಯಲಿ ತಪ್ಪದೆ
ನಡೆಯ ಬಲ್ಲವನವನೆ ಶಿಷ್ಯನು ರಾಯ ಕೇಳೆಂದ ೮೪

೮೦. ಮಡದಿಯಾದವಳು ಏಕಕಾಲದಲ್ಲಿ ವೇಶ್ಯೆಯಂತೆ ಮನಸ್ಸನ್ನು ರಂಜಿಸಿ, ದಾಸಿಯಂತೆ ಉಪಚರಿಸಬೇಕು. ಪತಿಭಕ್ತಿಯಲ್ಲಿ ಕೊರತೆ ಇಲ್ಲದವಳಾಗಿ ವಾತ್ಸಲ್ಯದಲ್ಲಿ ತಾಯಿಯಂತೆ ನಡೆದುಕೊಳ್ಳಬೇಕು. ಗೃಹಕೃತ್ಯದ ಆಲೋಚನೆಯಲ್ಲಿ ಮಂತ್ರಿಯಂತೆ ಸಲಹೆಯನ್ನು ಕೊಡಬೇಕು. ಇದು ಮಡದಿಯ ಲಕ್ಷಣ.

೮೧. ಮಹಾರಾಜ, ರಾಜಪುತ್ರನಾದವನು ತಂದೆ ತಾಯಿಗಳ ಆಜ್ಞೆಯನ್ನು ಸಂತೋಷದಿಂದ ಪಾಲಿಸುತ್ತ ವಿನಯದಿಂದ ನಡೆದುಕೊಳ್ಳಬೇಕು. ಧರ್ಮದಿಂದ ರಾಜ್ಯಪಾಲನೆಮಾಡಲು ನೆರವಾಗಿ ಬಂಧುಬಳಗಗಳನ್ನು ಸಲಹಿ ಬ್ರಾಹ್ಮಣರಿಗೆ ಆಶ್ರಯವನ್ನಿತ್ತು ಸನ್ಮಾರ್ಗದಲ್ಲಿ ನಡೆದುಕೊಂಡರೆ ಪೂಜಾರ್ಹನಾಗುತ್ತಾನೆ.

೮೨. ಇಹಪರಗಳಲ್ಲಿ ಹಿತವಾಗುವ ಕಾರ್ಯವನ್ನು ಮಾಡುತ್ತ, ವೇದೋಕ್ತವಾದ ಆಚಾರವನ್ನು ಪಾಲಿಸುತ್ತ, ಸಕಲ ವಿದ್ಯೆಗಳಲ್ಲಿಯೂ ಪಾರಂಗತನಾಗಿ, ಯುದ್ಧದಲ್ಲಿ ಶತ್ರುಗಳನ್ನು ಗೆಲ್ಲುವ ಪರಾಕ್ರಮಿಯಾಗಿ, ಶರಣಾಗತರನ್ನು ರಕ್ಷಿಸತಕ್ಕವನು ರಾಜಪುತ್ರನೆನಿಸಲು ಅರ್ಹನಾಗುತ್ತಾನೆ.

೮೩. ಇಂದ್ರಿಯಗಳನ್ನು ಜಯಿಸಿ, ಕರ್ಮದ ಕೋಟಲೆಗಳಿಗೆ ಸಿಲುಕದೆ, ವಿಷಯಸುಖಗಳನ್ನು ದೂರಮಾಡಿ, ಮಾಯಾ ಪಾಶವನ್ನು ಹರಿದು, ಸುಖದುಃಖಗಳೆಂಬ ದ್ವಂದ್ವಗಳನ್ನು ಮೀರಿದವನು ಗುರುವೆನಿಸಲು ಅರ್ಹನಾಗುತ್ತಾನೆ.

೮೪. ದೇಹ ಧನಗಳೆಲ್ಲವನ್ನೂ ಗುರುವಿಗೆ ಮೀಸಲಾಗಿರಿಸಿ, ಗುರುವಿನ ಪಾದಗಳನ್ನು ನಂಬಿ ಸೇವಿಸುತ್ತ, ಆತನು ಕೊಟ್ಟ ಕೆಲಸಗಳನ್ನು ಶ್ರದ್ಧೆಯಿಂದ ಮಾಡುತ್ತ, ತಿರುಗಿ ಉತ್ತರವನ್ನು ಕೊಡದೆ ಭಯ ಭಕ್ತಿಗಳಿಂದ ನಡೆಯತಕ್ಕವನು ಶಿಷ್ಯನೆನಿಸಲು ಅರ್ಹನಾಗುತ್ತಾನೆ.

ಯುಕುತಿವಿದರುಗವಿದರುಗಳಾಗಿ ವಿದ್ಯಾ
ಧಿಕರೆನಿಸಿ ಸಮಬುದ್ಧಿಗಳ ನಾ
ಟಕವ ನಟಿಸುತ ಪರಮತತ್ವಜ್ಞಾನಪರರಾಗಿ
ಸಕಲ ಕಳೆಯಲಭಿಜ್ಞರಹ ಧಾ
ರ್ಮಿಕರು ಪರಪುರುಷಾರ್ಥಿಗಳು ವೈ
ದಿಕರಲೇ ವಿದ್ವಾಂಸರೆನಿಸುವರರಸ ಕೇಳೆಂದ ೮೫

ದಂಡನೀತಿ ಸ್ಮಾರ್ತಶೌಚೋ
ದ್ದಂಡ ವೇದಾಧ್ಯಯನ ನಿಪುಣನ
ಪಂಡಿತಪ್ರಿಯ ಶಾಂತಿ ಪೌಷ್ಟಿಕ ಕರ್ಮದೀಧಿತನ
ಚಂಡ ದೈವಜ್ಞನನಧಿಕಗುಣ
ಮಂಡನನ ಬಹು ಶಾಸ್ತ್ರಪಠಣನ
ಪಂಡಿತನ ಪೌರೋಹಿತನ ಮಾಡುವುದರಸ ಕೇಳೆಂದ ೮೬

ಸ್ಥೂಲ ಸೂಕ್ಷ್ಮ ಕೃತಜ್ಞನುತ್ಸವ
ಶೀಲನಕ್ರೋಧಿಯನ ದೀರ್ಘವಿ
ಶಾಲ ಸೂತ್ರಿಯ ವೃದ್ಧಸೇವಕ ಸತ್ಯವಾಕ್ಯುಚಿಯ
ಕಾಲವೇದಿ ವಿನೀತನವ್ಯಸ
ನಾಳಿ ಸೂರಿ ರಹಸ್ಯ ಸತ್ಕೃತಿ
ಪಾಲನಾನ್ವಿತ ಮಂತ್ರಿಯುಂಟೇ ರಾಯ ನಿನಗೆಂದ ೮೭

ತುರಗ ಗಜ ಭಟರಳವರಿವ ಸಂ
ಗರ ಮಹೋತ್ಸಾಹನ ಜಿತಶ್ರಮ
ನರಿಕಟ ಭೇದಕನ ನಾನಾಯುಧ ವಿಶಾರದನ
ಭರಿತ ಧೈರ್ಯನ ಪತಿಹಿತನ ಸಂ
ಗರಸದಾರನನೂರ್ಧ್ವರೋಮನ
ನಿರದೆ ಸೇನಾಪತಿಯ ಮಾಡುವುದರಸ ಕೇಳೆಂದ ೮೮

ತಿಳಿದವನ ಮತಿವಿದನ ಭಾಷಾ
ವಳಿ ಲಿಪಿಜ್ಞನ ಸಾಕ್ಷರನ ಮಂ
ಡಳಿಕ ಸಾವಂತರ ವಿಶೇಷದಲವಸರವನರಿದು
ಸಲೆ ಕರೆವ ಕಳುಹಿಸುವ ನಿಲಿಸುವ
ಬಲುಹನುಳ್ಳನ ಸುಕರ ದುಷ್ಕರ
ತಿಳಿವ ಹೃದಯನ ಸಂಧಿವಿಗ್ರಹರೆನಿಸಬೇಕೆಂದ ೮೯

೮೫. ಶಾಸ್ತ್ರಸಂಮತವಾದ ಯುಕ್ತಿಗಳನ್ನು ಬಲ್ಲವರೂ ಪಕ್ಷಪಾತವಿಲ್ಲದ ಸಮಬುದ್ಧಿಯವರೂ ತತ್ತ್ವಜ್ಞಾನಿಗಳೂ ಧರ್ಮನಿಷ್ಠರೂ ಮೋಕ್ಷಮಾರ್ಗದಲ್ಲಿ ಇರತಕ್ಕವರೂ ವೇದಾರ್ಥವನ್ನು ಬಲ್ಲವರೂ ಯಾರಾಗಿದ್ದಾರೋ ಅವರು-ವಿದ್ವಾಂಸರೆನಿಸಿಕೊಳ್ಳಲು ಅರ್ಹರಾಗುತ್ತಾರೆ.

೮೬. ಮಹಾರಾಜ, ರಾಜನೀತಿ ಧರ್ಮಶಾಸ್ತ್ರವಿಹಿತವಾದ ಆಚಾರ ವೇದಾಧ್ಯಯನ-ಇವುಗಳಲ್ಲಿ ನಿಪುಣನಾಗಿಯೂ ಪಂಡಿತರಿಗೆ ಪ್ರಿಯನಾಗಿಯೂ ಶಾಂತಿಪೌಷ್ಟಿಕ ಕರ್ಮಗಳಲ್ಲಿ ದಕ್ಷನಾಗಿಯೂ ಜ್ಯೋತಿಷವನ್ನು ಬಲ್ಲವನಾಗಿಯೂ ಗುಣಶಾಲಿಯಾಗಿಯೂ ಅನೇಕ ಶಾಸ್ತ್ರಗಳನ್ನು ಓದಿದವನಾಗಿಯೂ ಇರತಕ್ಕವನನ್ನು ಪುರೋಹಿತನನ್ನಾಗಿ ಮಾಡಿಕೊಳ್ಳಬೇಕು.

೮೭. ಮಂತ್ರಿಯಾದವನು ಕಾರ್ಯದ ಸ್ಥೂಲ ಸೂಕ್ಷ್ಮತೆಗಳನ್ನು ಬಲ್ಲವನೂ ಉತ್ಸಾಹಶಾಲಿಯೂ ಶಾಂತಸ್ವಭಾವದನೂ ಆಗಿರಬೇಕು. ತಡಮಾಡದೆ ತ್ವರಿತವಾಗಿ ಕಾರ್ಯವನ್ನು ಅವನು ನಡೆಸಬೇಕು. ಹಿರಿಯರನ್ನು ಸೇವಿಸತಕ್ಕವನೂ ಸತ್ಯವಂತನೂ ಆಗಿರಬೇಕು. ಲಂಚಕ್ಕೆ ಕೈ ನೀಡದೆ ಪರಿಶುದ್ಧನಾಗಿರಬೇಕು. ಕಾಲಾಕಾಲಗಳನ್ನು ಬಲ್ಲವನೂ ವಿನಯ ಸಂಪನ್ನನೂ ಆಗಿದ್ದು ಯಾವ ದುಷ್ಟವ್ಯಸನಗಳೂ ಇಲ್ಲದವನಾಗಿರಬೇಕು. ರಾಜರಹಸ್ಯವನ್ನು ಅವನು ಹೊರಗೆ ಬಿಡಬಾರದು. ಇಂತಹ ಮಂತ್ರಿಯು, ಮಹಾರಾಜ, ನಿನ್ನ ಬಳಿಯಲ್ಲಿದ್ದಾನೆಯೇ?

೮೮. ಅಶ್ವಬಲ, ಗಜಸೈನ್ಯ ಮತ್ತು ಸೈನಿಕರ ಬಲಾಬಲಗಳನ್ನು ತಿಳಿದುಕೊಳ್ಳ ಬಲ್ಲವನೂ ರಣೋತ್ಸಾಹಿಯೂ ಆಯಾಸವನ್ನರಿಯದವನೂ ವೈರಿಸೇನೆಯನ್ನು ನಾಶಗೊಳಿಸಬಲ್ಲ ದಕ್ಷನೂ ನಾನಾಯುಧಗಳ ಪ್ರಯೋಗದಲ್ಲಿ ವಿಶಾರದನೂ ಧೀರನೂ ಸ್ವಾಮಿಭಕ್ತನೂ ಉತ್ಸಾಹಶಾಲಿಯೂ ಆದವನನ್ನು ಸೇನಾಪತಿಯನ್ನಾಗಿ ನಿಯಮಿಸಬೇಕು.

೮೯. ವಿವೇಚನಾಶೀಲನೂ ಪರರ ಮನಸ್ಸನ್ನು ತಿಳಿಯಬಲ್ಲ ಸೂಕ್ಷ್ಮ ಗ್ರಾಹಿಯೂ ವಿವಿಧಭಾಷೆಗಳನ್ನೂ ಅನೇಕ ಲಿಪಿಗಳನ್ನೂ ಅರಿತವನೂ ಸಾಮಂತರೇ ಮೊದಲಾದವರನ್ನು ಯಾವ ಸಂದರ್ಭದಲ್ಲಿ ಕಾಣಬೇಕು-ಕರೆಸಬೇಕು ಎಂಬುದನ್ನು ಬಲ್ಲವನೂ ಯಾವುದು ಸುಲಭ, ಯಾವುದು ಕಷ್ಟ- ಎಂದು ವಿವೇಚಿಸಬಲ್ಲವನೂ ಆದ ವಿದ್ವಾಂಸನನ್ನು ಸಂಧಿವಿಗ್ರಹಿ (ರಾಯಭಾರಿ)ಯನ್ನಾಗಿ ನೇಮಿಸಬೇಕು.

ಮಿಸುಪ ಮಣಿಗಣ ಲೋಹ ಕಾಂಚನ
ವಿಸರ ಭೇದವನರಿವ ಕೊಟ್ಟುದ
ನಸಿಯಲೀಯದೆ ತಾನು ಭಕ್ಷಿಸದಹಿ ನಿಧಾನವನು
ಒಸೆದು ಕಾದಿಪ್ಪಂತೆ ಕಾದಿಹ
ಹುಸಿಯದಾಪ್ತನ ಬಹು ಕುಟುಂಬ
ವ್ಯಸನವುಳ್ಳನ ಮಾಳ್ಪುದೈ ಭಂಡಾರರಕ್ಷಕನ ೬೦

ಮನ ವಚನ ಕಾಯದಲಿ ದಾತಾ
ರನ ಹಿತವನುಳ್ಳನ ವಿನೀತನ
ವಿನುತ ವನಿತಾ ನತಮುಖನ ನಿಷ್ಕಳಿತ ರೋಷಕನ
ಮುನಿವವರ ಬುದ್ಧಿಯಲಿ ಸಿಲುಕದ
ವನ ವಿಶೇಷ ಕಳಾಪ್ರವೀಣನ
ಜನಪ ಚಿತ್ತೈಸುವುದೆಲೈ ತಾಂಬೂಲಧಾರಕನ ೬೧

ಪಿತೃ ಪಿತಾಮಹ ಸೂಪಶಾಸ್ತ್ರಾ
ಯುತನ ಕೈ ಕರಣೆಗಳಲಧಿಕನ
ನತಿಶುಚಿಯ ಸಾಧಕನನಕ್ರೋಧಿಯನನಾಲಸನ
ಪತಿಹಿತನ ಷಡುರಸ ವಿಶೇಷಾ
ನ್ವಿತನನಿತರಾಲಯ ವಿದೂರನ
ಪತಿಕರಿಸುವುದು ಸೂಪಕಾರತೆಗರಸ ಕೇಳೆಂದ ೬೨

ನಿಶಿತ ಪರಿಮಳಮೋದದಿಂ ಮೋ
ದಿಸುವ ಗಂಧದ್ರವ್ಯದಲಿ ಪಂ
ಳಿಸಿದ ಜೀವನ ಜೀವ ತನ್ನಯ ಜೀವನವೆಯೆಂದು
ವಸುಮತೀಶರಿಗಿತ್ತು ತಾ ಭೋ
ಗಿಸದೆ ಬಳಸದೆ ರಾಜನನೋಲ
ಗಿಸುವವನೆ ಪಾನೀಯಧಾರಕನರಸ ಕೇಳೆಂದ ೬೩

ಉನ್ನತನ ರೂಪಾಧಿಕನ ಸಂ
ಪೂರ್ಣದಕ್ಷನನನ್ಯರೆನ್ನವ
ರೆನ್ನದನ ಪರರಿಂಗಿತಾಕಾರ ಪ್ರಭೇದಕನ
ಮನ್ನಣೆಗೆ ಬೆರೆಯದನನಾಪ್ತನ
ನನ್ಯ ಕಾರ್ಯೋಚಿತ ಸಮಪ್ರತಿ
ಪನ್ನ ಪಡಿಹಾರಕನ ಮಾಡುವುದರಸ ಕೇಳೆಂದ ೬೪

೯೦. ರತ್ನ, ಚಿನ್ನ, ಕಬ್ಬಿಣ-ಮುಂತಾದವುಗಳ ಪರೀಕ್ಷೆಯನ್ನು ಬಲ್ಲವನು ಕೋಶಾ ಧಿಕಾರಿಯಾಗಲು ತಕ್ಕವನು. ಸರ್ಪವು ನಿಧಿಯನ್ನು ಕಾಯುವಂತೆ, ತನ್ನ ವಶಕ್ಕೆ ಬಂದ ಹಣವು ಕ್ಷಯಿಸದಂತೆಯೂ ತಾನು ಬಳಸದಂತೆಯೂ ಆತನು ಹಣವನ್ನು ರಕ್ಷಿಸುತ್ತಿರಬೇಕು. ಕೋಶಾಧಿಕಾರಿಯು ಸುಳ್ಳು ಹೇಳದವನೂ ಆಪ್ತನೂ ದೊಡ್ಡ ಕುಟುಂಬಿಯೂ ಆಗಿರಬೇಕು.

೯೧. ಮಹಾರಾಜ, ತಾಂಬೂಲಧಾರಕನು ಹೇಗಿರಬೇಕೆಂದರೆ: ಅವನು ಮನೋವಾಕ್ಕಾಯಗಳಲ್ಲಿ ಉದಾರಿಯೂ ವಿನಯಶೀಲನೂ ಸ್ತ್ರೀಯರೆದುರಿಗೆ ತಲೆತಗ್ಗಿಸಿ ನಡೆಯತಕ್ಕವನೂ ಕೋಪರಹಿತನೂ ಆಗಿರಬೇಕು. ಅವನು ಯಾರ ಕೋಪಕ್ಕೂ ಪಾತ್ರನಾಗದೆಯೂ ಕಲಾಭಿರುಚಿಯುಳ್ಳವನಾಗಿಯೂ ಇರಬೇಕು.

೯೨. ಅಡಿಗೆಮಾಡತಕ್ಕವನು ವಂಶಪರಂಪರೆಯಿಂದ ಪಾಕಶಾಸ್ತ್ರದಲ್ಲಿ ನುರಿತವನೂ ಕೈ ಮತ್ತು ಸಲಕರಣೆಗಳನ್ನು ಉಪಯೋಗಿಸುವುದರಲ್ಲಿ ಚತುರನೂ ಅತ್ಯಂತ ಶುಚಿಯೂ ಆಗಿರಬೇಕು. ಅವನು ಹೊಸದನ್ನು ಕಲಿಯುವ ಇಚ್ಛೆಯುಳ್ಳ ಸಾಧಕನೂ ಕೋಪರಹಿತನೂ ಆಗಿರಬೇಕು. ಅವನಲ್ಲಿ ಆಲಸ್ಯ ಸ್ವಭಾವ ವಿರಬಾರದು. ತನ್ನ ಸ್ವಾಮಿಗೆ ಹಿತವನ್ನು ಬಯಸತಕ್ಕವನೂ ಷಡ್ರಸಗಳನ್ನು ಬಳಸುವುದರಲ್ಲಿ ನಿಪುಣನೂ ಆಗಿರಬೇಕು. ಅಲ್ಲದೆ ಇತರರ ಮನೆಗೆ ನಿಷ್ಕಾರಣವಾಗಿ ಹೋಗಬಾರದು. ಅಂಥವನನ್ನು ರಾಜನು ಅಡಿಗೆಯ ಕೆಲಸಕ್ಕೆ ನೇಮಿಸಿಕೊಳ್ಳತಕ್ಕದ್ದು.

೯೩. ರಾಜನಿಗೆ ಪಾನೀಯವನ್ನು ಸಿದ್ಧಪಡಿಸಿ ಕೊಡತಕ್ಕವನು ಉತ್ತಮ ಪರಿಮಳದಿಂದ ಆನಂದಿಸತಕ್ಕವನೂ ಸುಗಂಧದ್ರವ್ಯವನ್ನು ಬಳಸುವ ರಾಜನ ಜೀವವೇ ತನ್ನ ಜೀವನಕ್ಕೆ ಆಧಾರವೆಂದು ಭಾವಿಸತಕ್ಕವನೂ ಆಗಿರಬೇಕು. ತಾನು ತಯಾರಿಸಿದ ಪಾನೀಯವನ್ನು ತಾನು ಕುಡಿಯದೆ ರಾಜನಿಗಿತ್ತು ಅವನನ್ನು ಸೇವಿಸತಕ್ಕವನಾಗಿರಬೇಕು.

೯೪. ನೀಳವಾದ ದೇಹಾಕೃತಿಯುಳ್ಳವನೂ ದಕ್ಷನೂ 'ಇವರು ಪರರು ಇವರು ನನ್ನವರು' ಎಂಬ ಭೇದಭಾವನೆ ಇಲ್ಲದವನೂ ಜನರನ್ನು ನೋಡಿದೊಡನೆ ಅವರ ಇಂಗಿತವನ್ನು ತಿಳಿಯಬಲ್ಲವನೂ ಜನರ ಸ್ತುತಿಗೆ ಮರುಳಾಗದವನೂ ಬಂದವರ ಕಾರ್ಯವಿಶೇಷವನ್ನು ಅರಿತುಕೊಳ್ಳಬಲ್ಲವನೂ ಆದವನನ್ನು ದ್ವಾರಪಾಲಕನನ್ನಾಗಿ ಗೊತ್ತು ಮಾಡಿಕೊಳ್ಳಬೇಕು.

ಗ್ರಾಮ ಮೂರರ ಸಂಚರಣೆಗಳ
ಸೀಮೆಯಲಿ ಸರಿಗಮಪದನಿಗಳ
ನೇಮ ತಪ್ಪದೆ ಹರಣಭರಣದ ಹೆಂಪು ತಿರುಪುಗಳ
ಕೋಮಲಿತ ಶಾರೀರ ಹೃದಯದ
ರಮಣೀಯಕ ರಚನೆಯಲ್ಲಿ ಸ
ನಾಮನೆನಿಸುವನವನೆ ಗಾಯಕನರಸ ಕೇಳೆಂದ ೯೫

ತಾಳಲಯ ಬೊಂಬಾಳ ಮಿಶ್ರದ
ಹೇಳಿಕೆಯನಾ ಠಾಯ ಶುದ್ಧದ
ಸಾಳಗದ ಸಂಕೀರ್ಣ ದೇಸಿಯ ವಿವಿಧ ರಚನೆಗಳ
ಮೇಳವರಿವುತ ವಾದ್ಯ ಸಾಧನ
ದೇಳಿಗೆಯ ಸಂಪೂರ್ಣ ಮಾರ್ಗದ
ಸೂಳುಗಳ ಲಯಮಾನವರಿದವನವನೆ ಗಾಯಕನು ೯೬

ಗಾಯದಲಿ ಮೇಣ್ ಚೊಕ್ಕೆಯದಲಡು
ಪಾಯಿಗಳಲುಪಕಾಯದೊಳಗೆ ನ
ವಾಯಿಗಳ ಬಿನ್ನಾಣದಲಿ ಬಳಿಸಂದು ಬೇಸರದೆ
ಸ್ಥಾಯಿಯಲಿ ಸಂಚಾರದಲಿ ಸಮ
ಗೈಯೆನಿಸಿ ನಾನಾ ವಿನೋದದ
ದಾಯವರಿವವನವನೆ ಮಲ್ಲನು ಕೇಳು ಧೃತರಾಷ್ಟ್ರ ೯೭

ಎಡಬಲನನಾರೈವುತೊಬ್ಬನ
ಬಿಡದೆ ನೋಡುತ ಮಕ್ಷಿಕಂಗಳ
ಗಡಣವನು ಕೆದರಿಸುತ ಕಿಗ್ಗಣ್ಣಿಕ್ಕಿ ಕೆಲಬಲನ
ಜಡಿದು ನೂಕುವ ಸ್ವಾಮಿಕಾರ್ಯದ
ಕಡೆಯೆನಿಸುತಾವಾಗ ಸೇವೆಗೆ
ಸೆಡೆಯದವನೇ ಚಮರಧಾರಕನರಸ ಕೇಳೆಂದ ೯೮

ಗುಳಿ ತೆವರನೀಕ್ಷಿಸುತ ಬಟ್ಟೆಯ
ಮಳೆ ಮರಂಗಳ ಹೊಯ್ಲ ತಪ್ಪಿಸಿ
ನೆಳಲನರಸುತ ವೇಗಗತಿ ಸಾಮಾನ್ಯ ಗತಿಗಳಲಿ
ಬಳಿವಿಡಿದು ಭೂಭುಜರ ಯಾನಂ
ಗಳೊಳಗಳುಕದೆ ಡಗೆಯ ಸೈರಿಸಿ
ಬಳಸುವವನೇ ಛತ್ರಧಾರಕನರಸ ಕೇಳೆಂದ ೯೯

೯೫. ಷಡ್ಜ, ಮಧ್ಯಮ, ಗಾಂಧಾರ-ಎಂಬ ಸ್ವರಸಮೂಹ ರೂಪವಾದ ಮೂರು ಗ್ರಾಮಗಳಲ್ಲಿಯೂ ಸರಿಗಮಪದನಿ ಎಂಬ ಷಡ್ಜಾದಿ ಸಪ್ತ ಸ್ವರಗಳ ಏರಿಕೆ ಇಳಿಕೆ ತಿರುವುಗಳಲ್ಲಿಯೂ ನಿಪುಣನಾಗಿ, ಕೋಮಲ ಕಂಠವೂ ಹೃದಯಕ್ಕೆ ಆಪ್ಯಾಯನವನ್ನುಂಟು ಮಾಡುವ ರಚನಾಶಕ್ತಿಯೂ ಇರತಕ್ಕವನು ಗಾಯಕನೆನಿಸಿ ಕೊಳ್ಳಲು ಅರ್ಹನು.

೯೬. ಮಹಾರಾಜ, ಯಾವನು ತಾಳಲಯಗಳ ಸುಂದರವಾದ ಸಂಮಿಶ್ರಣವುಳ್ಳ ಗಾನವನ್ನೂ ಸಾರಂಗರಾಗಾದಿ ಸಂಮಿಶ್ರಿತವಾದ ದೇಸಿಯ ವಿವಿಧರಚನೆಗಳನ್ನೂ, ವಿವಿಧವಾದ್ಯಗಳೊಡನೆ ಮಾರ್ಗದ ವಿಧಾನವನ್ನೂ ಲಯಮಾನಗಳನ್ನೂ ಅರಿತು ಹಾಡಬಲ್ಲನೋ ಅವನೇ ಗಾಯಕನೆನಿಸಿಕೊಳ್ಳುತ್ತಾನೆ.

೯೭. ಯಾವನು ಎದುರಾಳಿಗೆ ಪೆಟ್ಟುಕೊಡುವ ವಿಧಾನವನ್ನೂ ವರಸೆಗಳನ್ನೂ ವಿವಿಧೋಪಾಯಗಳನ್ನು ಆಶ್ರಯಿಸುವಬಗೆಯನ್ನೂ ಬಲ್ಲನೋ ದೇಹದ ಅಂಗಗಳನ್ನು ನೂತನ ಪ್ರಕಾರದಲ್ಲಿ ತಿರುಗಿಸಿ ನಿಲ್ಲುವ ನಡೆಯುವ ಬಗೆಯಲ್ಲಿ ನಿಪುಣನೋ ನಾನಾ ವಿಧದ ಚಮತ್ಕಾರದ ಪಟ್ಟುಗಳನ್ನು ತಿಳಿದಿರುವನೋ ಅವನು ಜಟ್ಟಿಯೆನಿಸಿಕೊಳ್ಳುತ್ತಾನೆ.

೯೮. ಮಹಾರಾಜ, ರಾಜನಿಗೆ ಚಾಮರವನ್ನು ಬೀಸತಕ್ಕವನು ಎಡ ಬಲಗಳನ್ನು ಪರೀಕ್ಷಿಸುತ್ತ ಮುಖ್ಯವಾಗಿ ಒಡೆಯನ ಕಡೆಗೆ ಲಕ್ಷ್ಯವನ್ನಿಟ್ಟು ನೊಣ ಮೊದಲಾದವನ್ನು ಚದರಿಸುತ್ತ ಕಿರುಗಣ್ಣಿನಿಂದ ನೋಡಿ ಎಡಬಲಗಳಲ್ಲಿ ಜನರು ಬರದಂತೆ ತಡೆಯತಕ್ಕವ ನಾಗಿರಬೇಕು. ಸ್ವಾಮಿಕಾರ್ಯದಲ್ಲಿ ನಿಷ್ಠೆಯಿಂದಿದ್ದು ಸದಾ ಸೇವೆಗೆ ಹಿಂದೆಗೆಯದ ವನಾಗಿರತಕ್ಕದ್ದು.

೯೯. ರಾಜನಿಗೆ ಛತ್ರಿಯನ್ನು ಹಿಡಿಯತಕ್ಕವನು ದಾರಿಯಲ್ಲಿರುವ ಏರು ತಗ್ಗುಗಳನ್ನೂ ಮೆಳೆಮರಗಳನ್ನು ವೀಕ್ಷಿಸಿ ಅವುಗಳ ಹೊಯ್ಲನ್ನು ತಪ್ಪಿಸಿ ರಾಜನನ್ನು ಕರೆದು ಕೊಂಡು ಹೋಗತಕ್ಕವನಾಗಿರಬೇಕು. ತನ್ನ ಸ್ವಾಮಿಗೆ ನೆರಳಾಗುವುದನ್ನೇ ಗುರಿಯಾಗಿಟ್ಟು ಕೊಂಡು ಸಮಯಾನುಸಾರವಾಗಿ ವೇಗವಾಗಿಯೂ ಸಾಮಾನ್ಯ ರೀತಿಯಲ್ಲಿಯೂ ನಡೆಯುತ್ತ, ಪ್ರಯಾಣ ಕಾಲದಲ್ಲಿ ತನಗೆ ಬಿಸಿಲಿನ ತಾಪವಾದರೂ ಸಹಿಸಿಕೊಳ್ಳತಕ್ಕವನಾಗಿರಬೇಕು.

ಹರುಷದಲಿ ನಿಜಜನನಿ ಗರ್ಭವ
ಧರಿಸಿಕೊಂಡಾಡುವವೊಲುತ್ತಮ
ಪುರುಷರಂತರ್ಯಾಮಿಯನು ತಾಳ್ವಂತೆ ಭೂಭುಜರ
ಧರಿಸಿ ಸುಖ ಸಂಗತಿಗಳಲಿ ಸಂ
ಚರಿಸುತಾಳ್ದನ ಹಾನಿ ವೃದ್ಧಿಯ
ಲಿರಲು ಬೆಸದವರೆನಿಸುವರು ಭೂಪಾಲ ಕೇಳೆಂದ ೧೦೦

ಹಿಂದೆ ಮಾಡಿದ ಸುಕೃತ ಫಲವೈ
ತಂದು ಸಾರುವವೋಲು ನಾನಾ
ಚಂದದಾಪತ್ತಿನಲಿ ಹರಿನಿಜಭಕ್ತ ಸಂತತಿಯ
ಮುಂದೆ ನಿಲುವವೊಲವನಿಪಾಲರ
ದಂದುಗದ ಹೊತ್ತಿನಲಿ ಗಜ ಹಯ
ವೃಂದವನೆ ಚಾಚುವನು ವಾಹಕನರಸ ಕೇಳೆಂದ ೧೦೧

ಪರ್ವತವನೊಡೆದುಳಿಸಿ ಭೂಮಿಯ
ನಿಬ್ಬಗೆಯ ಮಾಡಿಸುತ ರಥ ಗಜ
ದೊಬ್ಬುಳಿಯ ಹರಗೆಡಸಿ ಕಾದಿಸುತಾನೆಗಳ ಮೇಲೆ
ಬೊಬ್ಬಿರಿದು ಶರವಳೆಯ ಸುರಿಸುರಿ
ದುಬ್ಬರದ ಬವರದೊಳಗಹಿತರಿ
ಗುಬ್ಬಸವನೆಸಗುವನೆ ಚೋಧನು ರಾಯ ಕೇಳೆಂದ ೧೦೨

ಕುದುರೆಗಳನಾರೈದು ರಥವನು
ಹದುಳಿಸುತ ಸಾರಥಿಯನೊಲವು
ತ್ತಿದಿರ ಮುರಿವುತ ತನ್ನ ಕಾಯಿದುಕೊಳುತ ಕೆಲಬಲನ
ಸದೆದು ಮರಳುವ ಲಾಗುವೇಗದ
ಕದನ ಕಾಲಾನಲನವನು ತಾ
ಮೊದಲಿಗನಲೇ ರಥಿಕರಿಗೆ ಧೃತರಾಷ್ಟ್ರ ಕೇಳೆಂದ ೧೦೩

ಬಿಟ್ಟ ಸೂಟಿಯಲರಿ ನೃಪಾಲರ
ಮುಟ್ಟಿ ಮೂದಲಿಸುತ್ತ ಮೋಹಿದ
ಥಟ್ಟನೊಡೆಹಾಯ್ದಹಿತ ಬಲದೊಳಗಾನೆವರಿವರಿದು.
ಹಿಟ್ಟು ಗುಟ್ಟುತ ಹೆಣನ ವಟ್ಟಾ
ವಟ್ಟಿ ಮಸಗಲು ಕಳನ ಚೌಕದ
ಲಟ್ಟಿ ಯಾಡಿಸಬಲ್ಲಡವ ರಾವುತನು ಕೇಳೆಂದ ೧೦೪

೧೦೦. ಅಂಗರಕ್ಷಕರು ಹೇಗಿರಬೇಕೆಂದರೆ: ಗರ್ಭದಲ್ಲಿರುವ ತನ್ನ ಶಿಶುವನ್ನು ತಾಯಿ ಪಾಲಿಸುವಂತೆಯೂ ಯೋಗಿಗಳು ಪರಮಾತ್ಮನನ್ನು ತಮ್ಮ ಹೃದಯದಲ್ಲಿ ಧರಿಸಿ ಸದಾ ಧ್ಯಾನಿಸುವಂತೆಯೂ ತಮ್ಮ ಒಡೆಯನನ್ನೇ ಗಮನವಿಟ್ಟು ಕಾಯುತ್ತ ಅವನಿಗೆ ಹಾನಿಯಾಗದಂತೆಯೂ ಏಳ್ಗೆ ಒದಗುವಂತೆಯೂ ನೋಡಿಕೊಳ್ಳತಕ್ಕವರಾಗಿರಬೇಕು.

೧೦೧. ಧೃತರಾಷ್ಟ್ರ, ಮನುಷ್ಯನು ಹಿಂದೆ ಮಾಡಿದ ಸುಕೃತಗಳ ಫಲವು ಸಮಯದಲ್ಲಿ ಬಂದೊದಗುವಂತೆಯೂ ಭಕ್ತರಿಗೆ ಕಷ್ಟ ಬಂದಾಗ ಅವರನ್ನು ರಕ್ಷಿಸುವುದಕ್ಕಾಗಿ ಶ್ರೀ ಹರಿಯು ಬಂದು ನಿಲ್ಲುವಂತೆಯೂ ರಾಜರಿಗೆ ವಿಪತ್ತಿನ ಸಮಯ ಒದಗಿದಾಗ ಆನೆ ಕುದುರೆಗಳ ಹಿಂಡನ್ನೇ ತಂದು ನೆರವಿಗಾಗಿ ಒದಗಿಸತಕ್ಕವನು ವಾಹಕನೆನಿಸಿಕೊಳ್ಳಲು ಯೋಗ್ಯನು.

೧೦೨. ಯೋಧನಾದವನು ಪರ್ವತವನ್ನು ಒಡೆಯುವನೋ ಭೂಮಿಯನ್ನು ಸೀಳುವನೋ ಎಂಬಂತೆ ನುಗ್ಗಿ, ವೈರಿರಾಜರ ರಥಗಜಾದಿಗಳನ್ನು ಚದರಿಸಿ, ಆನೆಗಳನ್ನೂ ಲಕ್ಷಿಸದೆ ಶರವೃಷ್ಟಿಗಳನ್ನು ಸುರಿಸಿ, ಶತ್ರುಗಳಿಗೆ ಉಬ್ಬಸವನ್ನು ಎಸಗತಕ್ಕ ಸಾಮರ್ಥ್ಯ ಶಾಲಿಯಾಗಿರಬೇಕು. ಅವನೇ ಯೋಧನೆನಿಸಲು ಅರ್ಹನು.

೧೦೩. ರಥಿಕನು ತನ್ನ ಕುದುರೆಗಳ ಪರೀಕ್ಷೆಯಲ್ಲಿ ಗಟ್ಟಿಗನಾಗಿ ರಥವನ್ನು ರಕ್ಷಿಸಿಕೊಳ್ಳುತ್ತ ಸಾರಥಿಯನ್ನು ಪ್ರೋತ್ಸಾಹಿಸುತ್ತ ಶತ್ರುಗಳನ್ನು ತರಿಯುತ್ತ ತನ್ನನ್ನು ಕಾಪಾಡಿಕೊಳ್ಳುತ್ತ ಎಡಬಲಗಳನ್ನು ಸದೆಯುತ್ತ ಹೋರಾಡಿ ಹಿಂತಿರುಗಿ ಬರಬಲ್ಲ ವೀರನಾಗಿರಬೇಕು. ಅವನನ್ನು ರಥಿಕ ಶ್ರೇಷ್ಠನೆನ್ನಬಹುದು.

೧೦೪. ರಾವುತನು ಶತ್ರುಸೇನೆಯಲ್ಲಿ ನುಗ್ಗಿ ವೈರಿಗಳನ್ನು ಮೂದಲಿಸುತ್ತ ವೈರಿಸೇನೆಯನ್ನು ತರಿತರಿದು ರಣರಂಗದಲ್ಲಿ ಹೆಣಗಳ ರಾಶಿಯನ್ನು ಪೇರಿಸಬಲ್ಲವನಾಗಿರಬೇಕು. ಅಂಥವನೇ ರಾವುತನೆನಿಸಿಕೊಳ್ಳಲು ಅರ್ಹನೆನಿಸುತ್ತಾನೆ.

ಬೇಸರದೆ ಕಾಳೋರಗನನ
ಡ್ಡೈಸಿ ಕಟ್ಟಿರುವೆಗಳು ಖಂಡವ
ಸೂಸಿ ಕಡಿಕಡಿದೊಟ್ಟಿದಂದದಲಹಿತ ಬಲದೊಳಗೆ।
ಓಸರಿಸದೊಳಹೊಕ್ಕು ಸಮರ ವಿ
ಳಾಸವನು ನೆರೆ ಮೆರೆದು ಕೇಶಾ
ಕೇಶಿಗೊದಗುವನವನೆ ಕಾಲಾಳರಸ ಕೇಳೆಂದ ೧೦೫

ಬರಲು ಕಂಡಡೆ ವಂದಿಸುತಲಂ
ತರಿಸಿ ಮಿಗೆ ಹತ್ತಿರವೆನಿಸದತಿ
ತರದ ದೂರವ ಸಾರದೀಪರಿ ಮಧ್ಯಗತನೆನಿಸಿ
ಪರಿವಿಡಿಯಲೋಲಗಿಸುತರಸನ
ಸಿರಿಮೊಗವನೀಕ್ಷಿಸುತ ಬೆಸಸಿದ
ನರವರಿಸದಾಕ್ಷಣಕೆ ಮಾಡುವನವನೆ ಸೇವಕನು ೧೦೬

ಕುನಖಿ ಕುಷ್ಠ ಕುಶೀಲಕನು ಕು
ಬ್ಜನನು ವಿಧವಾಲಿಂಗಿ ದಾಸಿಯ
ತನು ವಿಕಾರಿಯನಂಗ ಹೀನನ ಪಂಗುಳಾಂಧಕನ
ಘನ ರುಜಾಂಗನ ಬಿಡುದಲೆಯ ರೋ
ದಿನಿಯನುಪ್ಪವಡಿಸುವ ಸಮಯದೊ
ಳಿನಿಬರನು ಕಾಣ್ಬುದು ಮಹೀಶರಿಗಂಗವಲ್ಲೆಂದ ೧೦೭

ಕಲಶ ಕನ್ನಡಿ ಕರಿತುರಗ ಗೋ
ಕುಲ ವೃಷಭ ಬುಧನಿಚಯ ಗಿರಿ ಸಂ
ಕುಳ ಸುವಾಸಿನಿ ಮಾತೃಪಿತೃ ವರವಾಹಿನೀನಿಚಯ
ಜಲಧಿವಸನಚ್ಛತ್ರ ಉರ್ವೀ
ಲಲನೆಯರನೀಕ್ಷಿಸುವುದವನಿಪ
ತಿಲಕರುಪ್ಪವಡಿಸುವ ಸಮಯದೊಳರಸ ಕೇಳೆಂದ ೧೦೮

ಶ್ವಾನ ಕುಕ್ಕಟ ಕಾಕ ಬಕ ಪವ
ಮಾನ ಖಗಪತಿ ದಿವಿಜ ರಜನಿ ಕೃ
ಶಾನುವಿನ ಗಾರ್ದಭನ ವೃಷಭನ ಶಿಂಶುಮಾರಕನ
ವಾನರನ ಹಯ ಕುಂಜರನ ಪಂ
ಚಾನನನ ಮೃಗಪೋತಕನ ಗುಣ
ವಾ ನರೇಂದ್ರನೊಳಿರಲು ಬೇಹುದು ಭೂಪ ಕೇಳೆಂದ ೧೦೯

೧೦೫. ಅರಸ, ಕಟ್ಟಿರುವೆಗಳು ಕಾಳಸರ್ಪವನ್ನು ಅಡ್ಡಗಟ್ಟಿ ಮುತ್ತಿ ಕಡಿಕಡಿದು ಪೀಡಿಸುವಂತೆ, ಹಿಂದೆಗೆಯದೆ ವೈರಿಸೇನೆಯಲ್ಲಿ ನುಗ್ಗಿ ಪ್ರಬಲರಾದ ವೈರಿಗಳನ್ನೂ ಆಕ್ರಮಿಸಿ ಕೇಶಾಕೇಶಿಯಾಗಿ ಕಾದಾಡತಕ್ಕವರು ಕಾಲಾಳುಗಳೆನಿಸುತ್ತಾರೆ.

೧೦೬. ಅರಸ, ಸೇವಕನು ತನ್ನ ಸ್ವಾಮಿಯನ್ನು ಕಂಡೊಡನೆ ವಂದಿಸಿ, ಅವನಿಗೆ ಬಹಳ ಹತ್ತಿರದಲ್ಲಾಗಲಿ ಬಹಳ ದೂರದಲ್ಲಾಗಲಿ ನಿಲ್ಲದೆ ಮಧ್ಯವರ್ತಿಯಾಗಿ ನಿಂತಿರಬೇಕು. ಅವನ ಮುಖದಲ್ಲಿಯೇ ದೃಷ್ಟಿಯನ್ನಿರಿಸಿ ಒಡೆಯನ ಆಶಯವನ್ನು ತಿಳಿಯಲು ಸಮರ್ಥನಾಗಿರಬೇಕು. ಆಜ್ಞೆಯನ್ನಿತ್ತೊಡನೆ ತಡಮಾಡದೆ ನಡೆಸಬೇಕು.

೧೦೭. ಪ್ರಾತಃಕಾಲದಲ್ಲಿ ಹಾಸಿಗೆಯಿಂದೆದ್ದಾಗ ಮುಂದೆ ಹೇಳತಕ್ಕವರನ್ನು ನೋಡುವುದು ಒಳ್ಳೆಯದಲ್ಲ. ಅವರು ಯಾರೆಂದರೆ: ಕೆಟ್ಟ ಉಗುರುಳ್ಳವನು, ಕುಷ್ಠರೋಗಿ, ಕೆಟ್ಟ ನಡತೆಯವನು, ಕುಬ್ಜ, ವಿಧವಾರತ, ದಾಸಿ, ವಿಕಾರಿ, ಅಂಗಹೀನ, ಹೆಳವ, ಕುರುಡ, ರೋಗಿ, ಬಿಡುದಲೆಯವನು ಮತ್ತು ಅಳತಕ್ಕವನು.

೧೦೮. ಪ್ರಾತಃಕಾಲದಲ್ಲಿ ಏಳುವಾಗ ಇವುಗಳನ್ನು ನೋಡುವುದು ಶುಭಕರ. ಯಾವುವೆಂದರೆ: ಕಲಶ, ಕನ್ನಡಿ, ಆನೆ, ಕುದುರೆ, ಹಸು, ಎತ್ತು, ವಿದ್ವಾಂಸರು, ಬೆಟ್ಟ, ಸುವಾಸಿನಿ, ತಾಯಿ, ತಂದೆ, ಸೈನ್ಯ, ಸಮುದ್ರ, ವಸ್ತ್ರ, ಛತ್ರಿ, ಹುಲುಸಾದ ಗದ್ದೆ ಮತ್ತು ಸ್ತ್ರೀಯರು.

೧೦೯. ಧೃತರಾಷ್ಟ್ರ, ನಾಯಿ ಮುಂತಾದವುಗಳಲ್ಲಿಯೂ ಉತ್ತಮ ಗುಣಗಳಿವೆ. ಆ ಗುಣಗಳು ರಾಜನಲ್ಲಿ ನೆಲೆಸಿರಬೇಕು. ಯಾರಿಂದ ಯಾವ ಗುಣಗಳನ್ನು ರಾಜನು ಗ್ರಹಿಸಬೇಕೆಂದರೆ: ನಾಯಿ=ಸದಾ ಎಚ್ಚರಿಕೆ, ಕೋಳಿ=ಆಹಾರವನ್ನು ಶೋಧಿಸಿ ತಿನ್ನುವುದು, ಕಾಗೆ=ಬಾಂಧವರೊಡನೆ ಭೋಜನ, ಬಕ=ಏಕಾಗ್ರತೆ, ಗಾಳಿ=ಸರ್ವಸಮತೆ, ಗರುಡ=ದೂರ ದೃಷ್ಟಿ, ದೇವತೆ=ವೈಭವ, ರಾತ್ರಿ=ಅಭೇದ್ಯತೆ, ಅಗ್ನಿ=ಉಗ್ರತೆ, ಕತ್ತೆ=ಶ್ರಮಸಹಿಷ್ಣುತೆ, ಎತ್ತು=ಗಾಂಭೀರ್ಯ, ಮೊಸಳೆ=ಗೂಢವಾಗಿ ಶತ್ರುವನ್ನು ಪ್ರಹರಿಸುವುದು, ಕಪಿ=ಕಾರ್ಯಸಾಧನೆಯಲ್ಲಿ ಛಲ, ಕುದುರೆ=ಅಲ್ಪನಿದ್ರೆ, ಆನೆ=ಸೂಕ್ಷ್ಮದೃಷ್ಟಿ, ಸಿಂಹ=ಶೌರ್ಯ, ಜಿಂಕೆಮರಿ=ಚಟುವಟಿಕೆ.

ಪರಿಪರಿಯ ದಾನಂಗಳನು ಕರೆ
ಕರೆದು ಲೋಗರಿಗಿತ್ತು ಪರರನು
ಹೊರೆದು ತನ್ನಾಶ್ರಿತರನತಿಗಳೆದಾಪ್ತ ಬಾಂಧವರ
ಸರಕು ಮಾಡದೆ ಗರ್ವದಿಂದು
ಬ್ಬರಿಸುತಿಹ ಪಾತಕರ ಪದವಿಯ
ನರಸ ಬಣ್ಣಿಸಲಾರು ಬಲ್ಲರು ಯಮನ ನಗರಿಯಲಿ ೧೧೦

ಮೂರು ಕೋಟಿಯ ಕೋಟಿಧರ್ಮವ
ಮೀರದಿಹ ರೋಮಾಳಿ ಸಂಖ್ಯೆಯೊ
ಳಾರೆನ್ನೆನ್ನದೆ ನಿಜಪತಿಯ ಸಹಗಮನದಲಿ ತನುವ
ಮಾರಿದಬಲೆಯರುಗಳ ದೆಸೆಯಿಂ
ದಾರುಮಡಿ ಸ್ವರ್ಗಾದಿ ಭೋಗವ
ಸೂರೆಗೊಂಬುದು ತಪ್ಪದವನೀಪಾಲ ಕೇಳೆಂದ ೧೧೧

ಆವನೊಬ್ಬನು ಸತ್ಯಕೋಸುಗ
ಭಾವಶುದ್ಧಿಯಲೊರಡಿಚುವ ಶಪ
ಥಾವಸಾನದಲವನಧರ್ಮದಲರ್ಧವನು ಯಮನು
ಓವನನ್ಯಾಯದಲಿ ಸೂರುಳ
ನೋವಿ ರಚಿಸಿದವಂಗೆ ಗತಿಯಿ
ನ್ನಾವುದೆಂಬುದನಾರು ಬಲ್ಲರು ಭೂಪ ಕೇಳೆಂದ ೧೧೨

ಕೋಪವೆಂಬುನರ್ಥ ಸಾಧನ
ಕೋಪವೇ ಸಂಸಾರ ಬಂಧನ
ಕೋಪದಿಂದಿಹಪರದ ಸುಕೃತವು ಲಯವನೈದುವುದು
ಕೋಪವನು ವರ್ಜಿಸಲು ಬೇಹುದು
ಕೋಪವುಳ್ಳವನಾವನಾಗಲಿ
ಕಾಪುರುಷನಿಹಪರಕೆ ಚಿತ್ತೈಸೆಂದನಾ ವಿದುರ ೧೧೩

ವೈದ್ಯನಲಿ ಮಾಂಸದಲಿ ದ್ವಿಜನಲಿ
ನಿದ್ರೆಯಲಿ ತರುವಿನಲಿ ವನದಲಿ
ವಿದ್ಯೆಯಲಿ ಪದವಿಯಲಿ ಸಂಖ್ಯಾಸಂಖ್ಯೆವೆಸರುಗಳ
ತದ್ವಿಷಯಕೆ ಮಹಾ ಸಬುದವನು
ಹೊದ್ದಿಸುವುದತಿಕಷ್ಟವವರಿಗೆ
ಸದ್ಯಫಲವದು ತಪ್ಪದವನೀಪಾಲ ಕೇಳೆಂದ ೧೧೪

೧೧೦. ಧೃತರಾಷ್ಟ್ರ, ಪಾತ್ರದ ಯೋಗ್ಯತೆಯನ್ನು ವಿಚಾರಮಾಡದೆ ಕಂಡಕಂಡವರಿಗೆ ಧನವನ್ನಿತ್ತು, ತನ್ನನ್ನು ನಂಬಿ ಬದುಕುವ ಆಶ್ರಿತರನ್ನೂ ಬಾಂಧವರನ್ನೂ ಗಣಿಸದೆ, ಗರ್ವದಿಂದ ಬೀಗಿ ನಡೆಯತಕ್ಕವನು ಪಾಪಿ. ಯಮಲೋಕದಲ್ಲಿ ಅವನು ಅನುಭವಿಸುವ ಯಾತನೆಯನ್ನು ಯಾರಿಂದ ತಿಳಿಯಲಾದೀತು?

೧೧೧. ಯಾವ ಪತಿವ್ರತೆಯು ಹಿಂಜರಿಯದೆ ತನ್ನ ಪತಿಯ ದೇಹದೊಡನೆ ಸಹಗಮನಮಾಡಿ ದೇಹವನ್ನು ತ್ಯಜಿಸುವಳೋ, ಅವಳಿಗೆ ಸದ್ಗತಿಯು ಲಭಿಸುವುದು. ಅವಳ ಶರೀರದಲ್ಲಿ ಎಷ್ಟು ಕೋಟಿ ರೋಮಗಳಿರುತ್ತವೆಯೋ ಅಷ್ಟು ವರ್ಷಗಳವರೆಗೆ, ಆ ಸಾಧ್ವಿಯು ಸ್ವರ್ಗಸುಖವನ್ನನುಭವಿಸುವಳು.

೧೧೨. ಮಹಾರಾಜ, ಯಾವನಾದರೂ ಸತ್ಯದ ರಕ್ಷಣೆಗಾಗಿ ಭಾವ ಶುದ್ಧಿಯಿಂದ ಪ್ರತಿಜ್ಞೆ ಮಾಡುವನೋ, ಶಪಥ ಮಾಡಿದ್ದರಿಂದಲೇ ಆತನ ಧರ್ಮದಲ್ಲಿ ಅರ್ಧಭಾಗವನ್ನು ಮಾತ್ರ ಯಮನು ಉಳಿಸುವನು! ಇನ್ನು ಅಧರ್ಮದಿಂದ ಶಪಥ ಮಾಡುವನಿಗೆ ಯಾವ ದುರ್ಗತಿಯಾಗುವುದೋ ಯಾರು ಹೇಳಬಲ್ಲರು?
ತಾತ್ಪರ್ಯ : ಯಾವ ಕಾರಣದಿಂದಲೂ ಶಪಥ ಮಾಡುವುದು ಯುಕ್ತವಲ್ಲ.

೧೧೩. ಕೋಪವೆಂಬುದು ಅನರ್ಥಕ್ಕೆ ಕಾರಣ. ಕೋಪವೇ ಸಂಸಾರದ ಬಂಧನ. ಕೋಪದಿಂದ ಇಹಪರಗಳು ತಪ್ಪಿಹೋಗುತ್ತವೆ. ಆದ್ದರಿಂದ ಕೋಪವನ್ನು ವರ್ಜಿಸಬೇಕು. ಕೋಪವುಳ್ಳವನು ಯಾವನೇ ಆದರೂ ಅವನು ನಿಂದಾರ್ಹನೆಂದು ತಿಳಿಯಬೇಕು.

೧೧೪. ವೈದ್ಯ, ಮಾಂಸ, ಬ್ರಾಹ್ಮಣ, ನಿದ್ರೆ, ವೃಕ್ಷ, ವನ, ವಿದ್ಯೆ, ಪದವಿ–ಇಷ್ಟು ಶಬ್ದಗಳ ಹಿಂದೆ 'ಮಹಾ' ಎಂಬ ಪದವನ್ನು ವಿವೇಚನೆಯಿಲ್ಲದೆ ಉಪಯೋಗಿಸಬಾರದು. ಉಪಯೋಗಿಸಿದರೆ ಅಪಾರ್ಥವನ್ನು ಕೊಟ್ಟು ಅನರ್ಥಕಾರಿಯಾಗುತ್ತದೆ:

ಟಿಪ್ಪಣಿ · ವೈದ್ಯಾದಿ ಶಬ್ದಗಳ ಹಿಂದೆ 'ಮಹಾ' ಶಬ್ದವನ್ನಿಟ್ಟರೆ ಅರ್ಥಾಂತರವಾಗುತ್ತದೆ. ಮಹಾವೈದ್ಯ = ಯಮ, ಮಹಾಮಾಂಸ= ನರಮಾಂಸ, ಮಹಾಬ್ರಾಹ್ಮಣ= ಮೂರ್ಖ, ಮಹಾನಿದ್ರೆ= ಮರಣ, ಮಹಾವೃಕ್ಷ= ನೇಣೆಗೇರಿಸುವ ಮರ, ಮಹಾವನ= ಶ್ಮಶಾನ, ಮಹಾವಿದ್ಯೆ=ಕಳ್ಳತನ, ಮಹಾಪದವಿ= ಯಮಲೋಕದದಾರಿ.

ಗರುವ ಮಾನ್ಯನು ಮನಿತ ದೈವಾ
ಪರನು ಕಡುಸುಖಿ ಭೋಗಿ ರೂಪೋ
ತ್ತರನು ಧನಿಕನು ರಾಜಪೂಜ್ಯನು ಕೀರ್ತಿವಲ್ಲಭನು
ಗುರುಜನಕೆ ಬಹು ವಿದ್ಯವುಳ್ಳವ
ನರಸ ಕೇಳೈ ವಿದ್ಯೆಯಿಲ್ಲದ
ನರನು ನರಪಶುವವನ ಜನ್ಮ ನಿರರ್ಥಕರವೆಂದ ೧೧೫

ವಿದ್ಯೆ ಸತ್ಕುಲ ಬಹು ವಿವೇಕವು
ಬುದ್ಧಿ ಜಾಣ್ಮೆಯ ನುಡಿಯ ಸಡಗರ
ಶುದ್ಧಚಿತ್ತ ಸುಶೀಲ ಭುಜಬಲ ಭದ್ರನೆಂದೆನಿಸಿ
ಉದ್ಯುಗವು ಮೊದಲಾದ ಗುಣಗಳಿ
ವಿದ್ದು ಫಲವೇನೀ ಜಗದ ತೊರೆ
ಮದ್ದು ಹೊದ್ದದ ನರಗೆ ದಾರಿದ್ರಾಂಗನಾವರಗೆ ೧೧೬

ಧರೆಯೊಳಗೆ ಶುಚಿಯಹನು ವೈಶ್ವಾ
ನರನು ಕ್ರಾಂತಾದರ್ಶಿಯಹ ಕವಿ
ವರನು ಸುವ್ರತ ಕಾಮನೆನಿಸುವ ಬ್ರಾಹ್ಮಣೋತ್ತಮನು
ಹರಿಹರಾತ್ಮಕ ನಾಮಕೀರ್ತನ
ವೆರಸಿ ಬದುಕುವನೊಬ್ಬನೀ ನಾ
ಲ್ವರುಗಳಲ್ಲದೆ ಭುವನದೊಳಗನ್ಯತ್ರವಿಲ್ಲೆಂದ ೧೧೭

ಹರಿಭಕುತಿಲೋಲುಪನೆನಿಸಿ ಶಂ
ಕರನ ಬದ್ಧದ್ವೇಷಿಯಹ ಶಂ
ಕರನ ಭಕ್ತಿಯೊಳಧಿಕವಾಗಿಯು ವೈಷ್ಣವರ ಮೇಲೆ
ಎರಕವಿಲ್ಲದ ಕರ್ಮ ಚಾಂಡಾ
ಲರುಗಳೆಪ್ಪತ್ತೈದು ಕೋಟಿಯ
ನರಕದೊಳಗೋಲಾಡುತಿಹರೆಲೆ ರಾಯ ಕೇಳೆಂದ ೧೧೮

ಯತಿ ಕೆಡಗು ದುಸ್ಸಂಗದಲಿ ಭೂ
ಪತಿ ಕೆಡುಗು ದುರ್ಮಂತ್ರಿಯಲಿ ವರ
ಸುತ ಕೆಡುಗು ಲಾಲನೆಗಳಲಿ ಕೃಷಿ ಕೆಡುಗುಪೇಕ್ಷೆಯಲಿ
ಮತಿ ಕೆಡುಗು ಮಧುಪಾನದಲಿ ಸ
ದ್ಗತಿ ಕೆಡುಗು ದುಶ್ಚರಿತದಲಿ ನಿಜ
ಸತಿ ಕೆಡುಗು ದುರ್ವ್ಯಸನದಲಿ ಭೂಪಾಲ ಕೇಳೆಂದ ೧೧೯

೧೧೩. ವಿದ್ಯೆಯುಳ್ಳವನೇ ದೊಡ್ಡವನು, ಮಾನನೀಯ ದೇವತೆಗೆ ಸಮಾನ. ಆತನಿಗೆ ಸುಖವೂ ಭೋಗವೂ ದನವೂ ಕೈಗೂಡುತ್ತವೆ. ವಿದ್ಯೆಯುಳ್ಳವನು ರಾಜಪೂಜ್ಯನೂ ಕೀರ್ತಿಶಾಲಿಯೂ ಆಗುತ್ತಾನೆ. ಜನರಿಗೆ ಆತನು ಗುರುವಾಗಬಲ್ಲನು. ವಿದ್ಯೆಯಿಲ್ಲದವನು ಮನುಷ್ಯಾಕೃತಿಯ ಪಶುವೇ ಸರಿ. ವಿದ್ಯೆಯಿಲ್ಲದವನ ಜನ್ಮ ನಿರರ್ಥಕ.

೧೧೬. ಈ ಲೋಕದಲ್ಲಿ ಅಗ್ನಿ, ಉತ್ತಮವಾದ ಆದರ್ಶವುಳ್ಳ ವಿದ್ವಾಂಸ, ಸದಾಚಾರದಲ್ಲಿ ನಿರತನಾದ ಬ್ರಾಹ್ಮಣ, ಹರಿಹರರಲ್ಲಿ ಭೇದವೆಣಿಸದೆ ಭಕ್ತಿಯಿಂದ ದೇವರ ನಾಮವನ್ನು ಕೀರ್ತಿಸತಕ್ಕವನು–ಈ ನಾಲ್ವರು ಯಾವಾಗಲೂ ಶುಚಿಗಳೆಂದು ತಿಳಿಯಬೇಕು.

೧೧೭. ಮಹಾರಾಜ, ಈ ಜಗತ್ತಿನಲ್ಲಿ ಈ ನಾಲ್ವರು ಸದಾ ಶುಚಿಗಳೆಂದು ತಿಳಿ. ಯಾರೆಂದರೆ: ೧. ಅಗ್ನಿ ೨. ಕ್ರಾಂತದರ್ಶಿಯೆನಿಸಿದ ಕವಿ ಶ್ರೇಷ್ಠ ೩. ವ್ರತನಿಷ್ಠನಾದ ಬ್ರಾಹ್ಮಣ ೪. ಹರಿಹರರ ನಾಮಕೀರ್ತನವನ್ನು ಮಾಡುತ್ತ ಜೀವನವನ್ನು ಕಳೆಯತಕ್ಕವನು.

೧೧೮. ಕೆಲವರು ಹರಿಭಕ್ತರಾಗಿದ್ದು ಹರನನ್ನು ದ್ವೇಷಿಸುತ್ತಾರೆ. ಕೆಲವರು ಹರಭಕ್ತರಾಗಿದ್ದು ಹರಿಯನ್ನು ದ್ವೇಷಿಸುತ್ತಾರೆ. ಇವರೀರ್ವರೂ ಕರ್ಮ ಚಂಡಾಲರೆಂದು ತಿಳಿಯಬೇಕು! ಇವರು ಎಲ್ಲ ಬಗೆಯ ನರಕಗಳಲ್ಲಿ ಬಿದ್ದು ನವೆಯುವರು. (ಹರಿಹರರಲ್ಲಿ ಭೇದಭಾವನೆ ಇರಬಾರದು)

೧೧೯. ದುರ್ಜನರ ಸಹವಾಸದಿಂದ ಸಂನ್ಯಾಸಿಯು ಕೆಡುತ್ತಾನೆ. ದುರ್ಮಂತ್ರಿಯನ್ನು ನೇಮಿಸಿಕೊಳ್ಳುವುದರಿಂದ ರಾಜನು ಕೆಡುತ್ತಾನೆ. ಮುದ್ದಿಸುವುದರಿಂದ ಮಗನು ಕೆಡುತ್ತಾನೆ. ಉಪೇಕ್ಷೆಯಿಂದ ಕೃಷಿಯು ಹಾಳಾಗುತ್ತದೆ. ಹೆಂಡವನ್ನು ಕುಡಿಯುವುದರಿಂದ ಬುದ್ಧಿಯು ಕೆಡುತ್ತದೆ. ಕೆಟ್ಟ ನಡತೆಯಿಂದ ಸದ್ಗತಿಯು ಲಭಿಸದೆ ಹೋಗುತ್ತದೆ. ಕೆಟ್ಟ ಅಭ್ಯಾಸದಿಂದ ಹೆಂಗಸು ಕೆಡುತ್ತಾಳೆ.

ಉಂಡು ತೀರಿಸಬೇಕು ತಾ ಮುಂ
ಕೊಂಡು ಮಾಡಿದ ಪುಣ್ಯ ಪಾಪದ
ತಂಡವನು ತರಹಣವಿಲ್ಲದೆ ಭವ ಭವಂಗಳಲಿ
ಹಿಂಡಿ ಹಿಳಿವುದು ಬೆಂಬಿಡದೆ ಸಮ
ದಂಡಿಯಲಿ ಹಗೆ ಕೆಳೆಗಳೆನ್ನದೆ
ಗಂಡುಗೆಡಿಸದೆ ಬಿಡುವುದೇ ವಿಧಿಯೆಂದನಾ ವಿದುರ ೧೨೦

ಸ್ನೇಹಪೂರ್ವಕದಿಂದ ಮನದೊಳ
ಗಾಹಿಸಲು ಲಕ್ಷ್ಮೀಶನವರಿಗೆ
ಬೇಹ ಪುರುಷಾರ್ಥಂಗಳಹವೆಲ್ಲಿದ್ದರಲ್ಲಲ್ಲಿ
ಈ ಹದನು ತಪ್ಪುವುದೆ ಕೂರ್ಮನ
ಮೋಹದಲಿ ತತ್ಸಂತತಿಗೆ ನಿ
ರ್ವಾಹವಹವೋಲರಸ ಚಿತ್ತೈಸೆಂದನಾ ವಿದುರ ೧೨೧

ಕೂಡಿದೆಡೆಯಲಕೃತ್ಯ ಶತವನು
ಜೋಡಿಸಿದವರು ಮಿತ್ರರುಗಳಿಗೆ
ಕೇಡ ಚಿಂತಿಸಿದವರುಗಳು ಪುರುಷಾರ್ಥವನು ತಮಗೆ
ಮಾಡಿದವರುಗಳಿಗೆ ವಿಘಾತಿಯ
ಹೂಡಿದವದಿರು ನರಕದಳಗೋ
ಲಾಡದಿಹರೇ ರಾಯ ಚಿತ್ತೈಸೆಂದನಾ ವಿದುರ ೧೨೨

ಕುಲಜನಾಗಲಕುಲಜನಾಗಲಿ
ಜಲರುಹಾಕ್ಷನ ನಾಮ ಕೀರ್ತನ
ದೊಳಗೆ ಬದುಕುವನಾವನಾತನೆ ಸುಕೃತಿಯೆಂಬವನು
ಉಳಿದ ಜಪ ತಪ ನಿಯಮ ಹೋಮಂ
ಗಳಲಿ ಸಂಸಾರಾರ್ಣವವನು
ಚ್ಚಳಿಸಬಹುದೇ ರಾಯ ಚಿತ್ತೈಸೆಂದನಾ ವಿದುರ ೧೨೩

ಜಾತರೂಪದಲೇಸು ಹೊಲ್ಲೆಹ
ವೀತಿಹೋತ್ರನ ದೇಹಕಾರಣ
ಭೂತವಗಿಹುದವಗೆ ಸದಸತ್ತುಗಳ ಭೇದವನು
ನೀತಿ ಮುಖದಿಂದರಿವುದುತ್ತಮ
ನೀತ ಮಧ್ಯಮನೀತ ಕನಿಯಸ
ನೀತವೆಂಬುದನರಸ ಚಿತ್ತೈಸೆಂದನಾ ವಿದುರ ೧೨೪

೧೨೦. ತಾನು ಮಾಡಿದ ಪುಣ್ಯಪಾಪಗಳ ಫಲವನ್ನು ತಾನೇ ಉಂಡು ತೀರಿಸಬೇಕು. ಜನ್ಮಾಂತರಗಳಲ್ಲಿಯೂ ಅದು ಬೆಂಬಿಡಿದು ಬರುತ್ತದೆ. ಪುಣ್ಯ ಪಾಪಗಳಿಗೆ ಶತ್ರುಗಳು ಮಿತ್ರರು ಎಂಬ ಭೇದವಿಲ್ಲ. ಜನ್ಮಾಂತರದಲ್ಲಿ ಮಾಡಿದ ಕರ್ಮವೇ ಅದೃಷ್ಟ. ಅದು ಯಾರನ್ನೂ ಬಿಡುವುದಿಲ್ಲ.

೧೨೧. ಧೃತರಾಷ್ಟ್ರ, ಭಕ್ತಿಪೂರ್ವಕವಾಗಿ ಲಕ್ಷ್ಮೀರಮಣನಾದ ಭಗವಂತನನ್ನು ಧ್ಯಾನಿಸುತ್ತ ಇರುವವರಿಗೆ, ಅವರಿದ್ದಲ್ಲಿಯೇ ಪುರುಷಾರ್ಥಗಳು ಬಂದು ಒದಗುತ್ತವೆ. ಉದಾಹರಣೆಗೆ ಆಮೆಯನ್ನು ನೋಡು. ಅದು ಸಂಚರಿಸದೆ ಒಂದೆಡೆಯಲ್ಲಿಯೇ ಇದ್ದರೂ ಅದರ ಸಂತತಿಯ ಪೋಷಣೆಯು ನಡೆಯುತ್ತಲೇ ಇದೆ!

೧೨೨. ಹೋದೆಡೆಯಲ್ಲಿ ಪಾಪ ಕೃತ್ಯವನ್ನೆಸಗಿದವರು. ಸ್ನೇಹಿತರಿಗೆ ಕೇಡನ್ನು ಚಿಂತಿಸಿದವರು, ತಮಗೆ ಉಪಕಾರವನ್ನು ಮಾಡಿದವರಿಗೆ ಅಪಕಾರವನ್ನು ಮಾಡಿದವರು– ಇವರೆಲ್ಲರೂ ನರಕದಲ್ಲಿ ಓಲಾಡದೆ ಇರುತ್ತಾರೆಯೇ?

೧೨೩. ಉತ್ತಮಕುಲದಲ್ಲಿ ಹುಟ್ಟಿರಲಿ ದುಷ್ಕುಲದಲ್ಲಿಯೇ ಹುಟ್ಟಿರಲಿ ಯಾವಾತನು ಶ್ರೀಮನ್ನಾರಾಯಣನನ್ನು ಸದಾ ಸ್ಮರಿಸುತ್ತ ಬದುಕುವನೋ ಆತನೇ ಸುಕೃತಿ-ಪುಣ್ಯಶಾಲಿ. ದೇವರಲ್ಲಿ ಭಕ್ತಿಯನ್ನಿಡದೆ ಜಪತಪ-ಮುಂತಾದವುಗಳಲ್ಲಿ ತೊಡಗಿದರೆ ಏನಾದೀತು? ಅದರಿಂದ ಸಂಸಾರ ಸಮುದ್ರವನ್ನು ದಾಟಲಾದೀತೆ?

೧೨೪. ಅರಸ, ಚಿನ್ನದ ಗುಣದೋಷಗಳನ್ನು ಅಗ್ನಿಯಲ್ಲಿ ಕಾಯಿಸಿ ಪರೀಕ್ಷಿಸುವಂತೆ ಜನರಲ್ಲಿ ಇವನು ಉತ್ತಮ, ಇವನು ಮಧ್ಯಮ, ಇವನು ಕನಿಷ್ಠ–ಎಂಬುದನ್ನು ನೀತಿಯ ಒರೆಗಲ್ಲಿನಿಂದ ಪರೀಕ್ಷಿಸಿ ತಿಳಿಯಬೇಕು.

(ಈ ಪದ್ಯಕ್ಕೆ ಅರ್ಥಾಂತರವೂ ಸಾಧ್ಯ: ಚಿನ್ನವು ಅಗ್ನಿಯಿಂದ ಉತ್ಪನ್ನವಾಗಿದೆ. ಅಗ್ನಿಯ ತೇಜಸ್ಸು ಚಿನ್ನದಲ್ಲಿ ಬಂದು ಅದು ಶ್ರೇಷ್ಠವೆನಿಸಿದೆ. ಹಾಗೆಯೇ ತಂದೆತಾಯಿಗಳ ಗುಣದೋಷಗಳಿಂದ ಅವರ ಮಕ್ಕಳ ಗುಣದೋಷಗಳನ್ನು ನಿರ್ಣಯಿಸಬಹುದು)

ಅವನಿಯಲಿ ಜನಜನಿತ ಧನ ಧಾ
ನ್ಯವನು ಕಳಹಲಗೈದು ಸಂತೋ
ಷವನು ಮಾಡುವ ಕಡೆಯಲೊಂದಕೆ ನೂರು ಮಡಿಯಾಗಿ
ಲವಲವಿಕೆ ಮಿಗಲಿತ್ತು ಸಪ್ತಾಂ
ಗವನು ಸಲಹುತ್ತಿರಲುಬೇಹುದು
ರವಿಯವೊಲು ಸಾವಿರ ಮುಖದೊಳವನೀಶ ಕೇಳೆಂದ ೧೨೫

ಇನನುದಯಿಸಲಿ ಪಶ್ಚಿಮಾದ್ರಿಯೊ
ಳನಲನೊಮ್ಮೆ ಹಿಮಾಂಶುವಾಗಲಿ
ಕನಕಗಿರಿಗಲ್ಲಾಟವಾಗಲಿ ಪರ್ವತಾಗ್ರದಲಿ
ವನಜ ವಿಕಸಿತವಾದೊಡೆಯು ಸ
ಜ್ಜನರುಗಳು ನುಡಿದೆರಡನಾಡರು
ಮನ ವಚನ ಕಾಯದಲಿ ಚಿತ್ತೈಸೆಂದನಾ ವಿದುರ ೧೨೬

ಹರನ ಕೊರಳಿಂಗಾಭರಣವಾ
ದುರಗ ಪವನಾಶನವೆನಿಸುವಂ
ತರಸ ನಿನ್ನಯ ಬಸುರ ಬಂದೇನಹರು ಪಾಂಡವರು
ನರಪಶುಗಳಾದರು ಕಣಾ ನೀ
ನಿರಲು ವನವಾಸದಲಿ ಸೊಪ್ಪನ
ವರತ ಮೆಲುವುದೆ ರಾಯ ಚಿತ್ತೈಸೆಂದನಾ ವಿದುರ ೧೨೭

ದೇವತಾಸ್ಥಾನದಲಿ ವಿಪ್ರ ಸ
ಭಾವಳಯದಲಿ ರಾಜಪುರುಷರ
ಸೇವೆಯಲಿ ರವಿಶಶಿಗಳುದಯಾಸ್ತಮಯ ಕಾಲದಲಿ
ಗೋವುಗಳ ನೆರವಿಯಲಿ ವರ ವೃಂ
ದಾವನದೊಳುಪಹತಿಯ ಮಾಡುವು
ದಾವ ಗುಣ ಗರುವರಿಗೆ ಚಿತ್ತೈಸೆಂದನಾ ವಿದುರ ೧೨೮

ನಾಯ ನಡುಬೋನವನು ನೆಚ್ಚಿ ವೃ
ಥಾಯ ಕೇಡಬೇಡಾ ಯುಧಿಷ್ಠಿರ
ರಾಯನನು ಕರೆಸುವುದು ಭೀಷ್ಮಾದಿಗಳ ಮುಂದಿಟ್ಟು
ನ್ಯಾಯಮುಖದಲಿ ಸಕಲ ರಾಜ್ಯ
ಶ್ರೀಯನರ್ಧವನಿತ್ತು ಬದುಕುವು
ದಾಯತಿಕೆಯೊಳಗಹುದು ಚಿತ್ತೈಸೆಂದನಾ ವಿದುರ ೧೨೯

೧೨೫. ಮಹಾರಾಜ. ಅರಸನು ಧನಧಾನ್ಯಗಳನ್ನು ಆಶ್ರಿತರ ಸಂರಕ್ಷಣೆಗಾಗಿ ವಿನಿಯೋಗಿಸಿ ಅವರಿಗೆ ಸಂತೋಷವನ್ನುಂಟು ಮಾಡಿದರೆ, ಅವು ಒಂದಕ್ಕೆ ನೂರು ಮಡಿಯಾಗಿ ಫಲಿಸಿ ಅರಸನಿಗೇ ಹಿಂದಿರುಗುತ್ತವೆ. ಸೂರ್ಯನು ತನ್ನ ಸಹಸ್ರಕಿರಣಗಳನ್ನು ಬೀರಿ ಜಗತ್ತನ್ನು ಪಾಲಿಸುವಂತೆ, ರಾಜನ ಸಾವಿರಾರು ಬಗೆಯಿಂದ ತನ್ನ ಸಪ್ತಾಂಗವನ್ನು ಪಾಲಿಸಬೇಕು. ಸಪ್ತಾಂಗಗಳು : ರಾಜ, ಮಂತ್ರಿ, ಮಿತ್ರ, ಕೋಶ, ರಾಷ್ಟ್ರ, ಕೋಟೆ ಸೈನ್ಯ.

೧೨೬. ಮಹಾರಾಜ, ಸಜ್ಜನರು ಆಡಿದ ಮಾತಿಗೆ ಎಂದೂ ತಪ್ಪುವುದಿಲ್ಲ. ಸೂರ್ಯನು ಪಶ್ಚಿಮ ದಿಕ್ಕಿನಲ್ಲಿ ಮೂಡಿದರೂ ಚಂದ್ರನು ಬೆಂಕಿಯಂತೆ ಸುಟ್ಟರೂ ಮೇರು ಪರ್ವತವು ಅಲ್ಲಾಡಿದರೂ ತಾವರೆಯ ಹೂ ಬೆಟ್ಟದ ತುದಿಯಲ್ಲಿ ಅರಳಿದರೂ ಸತ್ಪುರುಷರು ಎರಡು ಮಾತುಗಳನ್ನಾಡುವುದಿಲ್ಲ. ಮನಸ್ಸು ಮಾತು ದೇಹ ಇವುಗಳಿಂದ ಒಂದೇ ಬಗೆಯಲ್ಲಿ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಾರೆ.

೧೨೭. ಧೃತರಾಷ್ಟ್ರ, ಪಾಂಡವರು ನಿನ್ನ ಮಕ್ಕಳಲ್ಲವೆ? ಆದರೂ ಅವರಿಗೆ ವನವಾಸವೇ ಗತಿಯಾಗಬೇಕೆ? ಸರ್ಪವು ಪರಮೇಶ್ವರನ ಕೊರಳಿನಲ್ಲಿ ಆಭರಣವಾಗಿ ಮೆರೆದರೂ ಗಾಳಿಯೇ ಅದಕ್ಕೆ ಆಹಾರ! ಹಾಗೆ ಪಾಂಡವರು ರಾಜಪುತ್ರರಾದರೂ ನರಪಶುಗಳಾಗಿ ಕಾಡಿನಲ್ಲಿ ಎಲೆಗಳನ್ನು ತಿಂದು ಜೀವಿಸಬೇಕಾಯಿತು!

೧೨೮. ದೇವಸ್ಥಾನ, ಬ್ರಾಹ್ಮಣಸಭೆ, ರಾಜಸೇವಕರ ಸೇವಾಕಾರ್ಯ, ಸೂರ್ಯ ಚಂದ್ರರು ಉದಯಿಸುವ ಮತ್ತು ಅಸ್ತಮಿಸುವ ಸಮಯ, ಗೋವುಗಳ ಮಂದೆ, ವೃಂದಾವನ– ಇವುಗಳಲ್ಲಿ ಪೀಡೆಯನ್ನೊಡ್ಡುವುದು ಮಹಾ ಪುರುಷರಿಗೆ ಯೋಗ್ಯವಾದ ನಡತೆಯಲ್ಲ

೧೨೯. ನಾಯಿಯ ತಲೆಯ ಮೇಲಿನ ಬುತ್ತಿಯನ್ನು ನೆಚ್ಚಿ ವೃಥಾ ಕೆಡಬೇಡ. ಧರ್ಮರಾಯನನ್ನು ಕೂಡಲೇ ಕರೆಸಿಕೊಂಡು ಭೀಷ್ಮಾದಿಗಳ ಎದುರಿಗೆ ಮಾತುಕಥೆಯಾಡಿ, ಪಾಂಡವರಿಗೆ ಸಲ್ಲಬೇಕಾದ ಅರ್ಧ ರಾಜ್ಯವನ್ನು ಕೊಟ್ಟುಬಿಡು. ಇದರಿಂದ ಮುಂದೆ ನಿನಗೆ ಒಳ್ಳೆಯದಾಗುವುದು.

ಚಕ್ರವರ್ತಿಗಳಾರಲೇ ಭೂ
ಚಕ್ರದೊಳಗವರಿಗೆ ಮುರಾರಿಯ
ಚಕ್ರವೇ ಬೆಸಗೆಯ್ವುದಲ್ಲದೆ ಪಾಂಡು ತನಯರಿಗೆ
ಚಕ್ರಿ ತಾ ಬಂದವರ ಸೇವಾ
ಚಕ್ರದೊಳಗಿಹನಾ ಯುಧಿಷ್ಠಿರ
ಚಕ್ರವರ್ತಿಗದಾವನ್ಯೆ ಸರಿಯೆಂದನಾ ವಿದುರ ೧೩೦

ನಳನೃಪತಿ ದಮಯಂತಿ ಸೀತಾ
ಲಲನೆ ರಾಘವದೇವ ದ್ರೌಪದಿ
ಕಲಿಯುಧಿಷ್ಠಿ ರದೇವನಿವರಂತಾರು ಮಾನಿಸರು
ಇಳೆಯೊಳುತ್ತಮ ಕೀರ್ತಿಗಳು ಜಾ
ವಳದ ಪುರುಷರೆ ಧರ್ಮಪುತ್ರನ
ಗೆಲುವ ಪರಿಯೆಂತ್ಯೆ ಮಹಾದೇವೆಂದನಾ ವಿದುರ ೧೩೧

ಜನಪ ಕೇಳ್ಯೆ ಸ್ಕಂದನನು ರಾ
ಮನನು ಹನುಮನ ಭೀಮಸೇನನ
ವಿನತೆಯಾತ್ಮಜನಂತಿದ್ಯೆವರ ಭಾವಶುದ್ಧಿಯಲಿ
ನೆನೆದವರ ದುರಿತಂಗಳೋಡುವ
ವೆನಲು ನೀವೀ ಪವನಪುತ್ರನ
ನನುವರದೊಳೆಂತಕಟ ಜಯಿಸುವಿರೆಂದನಾ ವಿದುರ ೧೩೨

ಹರಿಹಯನು ಗುಹ ರಾಮ ಬಾಣಾ
ಸುರನು ದಶಶಿರ ಭೀಮಸೇನಾ
ದ್ಯರು ಕಣಾ ಗಿರಿಜಾಧಿನಾಥನ ಡಿಂಗರಿಗರಿವರು
ಸರಸವೇ ಮೃತ್ಯುಂಜಯನ ಕೂ
ಡರಸ ನಿನ್ನಳವರಿಯವೇ ಹರಿ
ಸುರರೊಡನೆ ಹಗೆಗೊಂಬನೇ ಧೃತರಾಷ್ಟ್ರ ಕೇಳೆಂದ ೧೩೩

ಬಲಿ ವಿಭೀಷಣ ಭೀಷ್ಮ ನಾರದ
ಫಲುಗುಣನು ಪ್ರಹ್ಲಾದದೇವನು
ಜಲರುಹಾಕ್ಷನ ನಚ್ಚು ಮೆಚ್ಚಿನ ಭಕುತರಿವರುಗಳು
ಸುಲಭವೇ ನಿನಗವರ ಕೂಡಣ
ಕಲಹ ಬೀಭತ್ಸುವಿನ ಕೈ ಮನ
ದಳವನರಿಯಾ ಕಂಡು ಕಾಣುತ ಮರುಳಹರೆಯೆಂದ ೧೩೪

೧೩೦. ಧೃತರಾಷ್ಟ್ರ, ಈ ಭೂಮಿಯಲ್ಲಿ ಪಾಂಡವರನ್ನು ಎದುರಿಸುವ ಚಕ್ರವರ್ತಿಗಳು ಯಾರಿದ್ದಾರೆ? ಶ್ರೀಕೃಷ್ಣನ ಸುದರ್ಶನ ಚಕ್ರವೇ ಎಲ್ಲರಿಗೂ ಆಜ್ಞೆಯನ್ನೀಯಲು ಸಮರ್ಥವಾಗಿದೆ. ಚಕ್ರಧಾರಿಯಾದ ಶ್ರೀಕೃಷ್ಣನು ಬಂದು ಪಾಂಡವರ ಸೇವೆಗೆ ನಿಂತಿದ್ದಾನೆ. ಯುಧಿಷ್ಠಿರ ಚಕ್ರವರ್ತಿಗೆ ಸಾಟಿಯಾದವರು ಯಾರೂ ಇಲ್ಲ.

೧೩೧. ಈ ಜಗತ್ತಿನಲ್ಲಿ ನಳದಮಯಂತಿಯರಿಗೂ ಸೀತರಾಮ ಚಂದ್ರರಿಗೂ ದ್ರೌಪದೀ ಧರ್ಮರಾಜರಿಗೂ ಸಮವೆನಿಸುವ ಜೋಡಿಯಾವುದು? ಇವರೆಲ್ಲರೂ ಕೀರ್ತಿಶಾಲಿಗಳು; ಮಹಾನುಭಾವರು; ಸಾಮಾನ್ಯರಲ್ಲ. ಧೃತರಾಷ್ಟ್ರ, ಧರ್ಮರಾಯನನ್ನು ಗೆಲ್ಲಲು ಸಾಧ್ಯವೆ?

೧೩೨. ಮಹಾರಾಜ, ಷಣ್ಮುಖ ಶ್ರೀರಾಮ ಹನುಮಂತ ಭೀಮಸೇನ ಗರುಡ–ಇವರನ್ನು ಪರಿಶುದ್ಧ ಚಿತ್ತದಿಂದ ನೆನೆದರೆ ಪಾಪ ಪರಿಹಾರವಾಗುವುದೆಂದು ಬಲ್ಲವರು ಹೇಳುತ್ತಾರೆ. ಹೀಗಿರಲು ವಾಯುಪುತ್ರನಾದ ಭೀಮನನ್ನು ನೀವು ಜಯಿಸುವುದು ಹೇಗೆ?

೧೩೩. ಇಂದ್ರ, ಷಣ್ಮುಖ ಪರಶುರಾಮ, ಬಾಣಾಸುರ, ರಾವಣ, ಭೀಮಸೇನ–ಇವರೆಲ್ಲರೂ ಗಿರಿಜಾನಾಥನಾದ ಪರಮೇಶ್ವರನ ಭಕ್ತರಯ್ಯ. ಧೃತರಾಷ್ಟ್ರ, ನಿನ್ನ ಬಲವನ್ನರಿಯದೆ ಮೃತ್ಯುಂಜಯನೊಡನೆ ಯುದ್ಧಕ್ಕಿಳಿಯುವೆಯಾ? ಇದು ಸರಸಕ್ರೀಡೆಯೆಂದು ತಿಳಿದೆಯಾ? ಹರಿಯು ದೇವತೆಗಳೊಡನೆ ವೈರವನ್ನು ಬೆಳಸುವನೆ?

(ಶ್ರೀಕೃಷ್ಣನು ದೇವಾಂಶಸಂಭೂತರಾದ ಪಾಂಡವರಿಗೇ ಸಹಾಯ ಮಾಡುವನು ಎಂದು ಅಭಿಪ್ರಾಯ).

೧೩೪. ಬಲಿಚಕ್ರವರ್ತಿ, ವಿಭೀಷಣ, ಭೀಷ್ಮ, ನಾರದ, ಪ್ರಹ್ಲಾದ ಮತ್ತು ಅರ್ಜುನ–ಇವರು ಶ್ರೀಕೃಷ್ಣನ ನಚ್ಚು ಮೆಚ್ಚಿನ ಭಕ್ತರು. ಇಂಥವರನ್ನು ಎದುರಿಸುವುದು ಸುಲಭವೆ? ಅರ್ಜುನನು ಯಾರು? ಅವನ ಸಾಮರ್ಥ್ಯವೇನು?–ಎಂಬುದು ನಿನಗೆ ತಿಳಿಯದೆ ಹೋಯಿತೆ?

ಎಲ್ಲಿ ಯೋಗಾಧಿಪತಿ ಮುರಹರ
ನೆಲ್ಲಿಯರ್ಜುನದೇವನಿಹನ
ಲ್ಲಲ್ಲಿ ಜಯಸಿರಿಯಲ್ಲದೇ ಬೇರಿಲ್ಲ ಕೇಳಿದನು
ಬಲ್ಲವರು ಬಲ್ಲರು ಕಣಾ ನೀ
ನಿಲ್ಲಿ ಪಾಂಡು ಕುಮಾರರಿಗೆ ಸರಿ
ಯಿಲ್ಲ ಬಲ್ಲೈ ಹಿಂದೆ ಬಂದ ವಿಪತ್ಪರಂಪರೆಯ ೧೩೫

ಹಿಂದೆ ಗೋಗ್ರಹಣದಲಿ ದ್ರುಪದನ
ನಂದನೆಯ ವೈವಾಹದಲಿ ಬಳಿ
ಸಂದ ಗಂಧರ್ವಕನ ದೆಸೆಯಲಿ ಘೋಷಯಾತ್ರೆಯಲಿ
ಬಂದ ಭಂಗವ ಕಂಡು ಕಂಡೇ
ನೆಂದು ಪಾಂಡು ಕುಮಾರರೊಡನನು
ಸಂಧಿಸುವೆ ಕಲಹವನು ಚಿತ್ತೈಸೆಂದನಾ ವಿದುರ ೧೩೬

ಸಕಲ ನೀತಿ ರಹಸ್ಯವನು ಸು
ವ್ಯಕುತವೆನಲರುಹಿದೆನು ತತ್ವಕೆ
ಯುಕುತಿಯಾದರೆ ನೆನೆವುದಿನ್ನು ಸನತ್ಸುಜಾತನನು
ಮುಕುತಿಗಮಳಬ್ರಹ್ಮವಿದ್ಯಾ
ಪ್ರಕಟವನು ನೆನೆ ಮಾಡಿ ಚಿತ್ತದ
ವಿಕಳತೆಯನೊಡೆಮೆಟ್ಟಿ ಸಲಹುವನೆಂದು ಬೋಧಿಸಿದ ೧೩೭

೧೩೫. ಯೋಗೇಶ್ವರನಾದ ಶ್ರೀಕೃಷ್ಣನೂ ಗಾಂಡೀವಧಾರಿಯಾದ ಅರ್ಜುನನೂ ಎಲ್ಲಿರುವರೋ ಅಲ್ಲಿ ವಿಜಯಲಕ್ಷ್ಮಿಯು ಇದ್ದೇ ಇರುವಳೆಂದು ತಿಳಿ. ಈ ರಹಸ್ಯವನ್ನು ಬಲ್ಲವರೇ ಬಲ್ಲರು. ಧೃತರಾಷ್ಟ್ರ, ನೀನು ಪಾಂಡವರನ್ನು ಎದುರಿಸಲು ಸಮರ್ಥನಲ್ಲ., ಹಿಂದೆ ಬಂದ ವಿಪತ್ತು ಗಳು ನಿನಗೆ ಗೊತ್ತಿಲ್ಲವೆ?

೧೩೬. ಹಿಂದೆ ವಿರಾಟನಗರಕ್ಕೆ ಹೋಗಿ ಗೋಗ್ರಹಣ ಮಾಡಿದಾಗಲೂ, ದ್ರೌಪದಿಯ ವಿವಾಹ ಸಂದರ್ಭದಲ್ಲಿಯೂ ಘೋಷಯಾತ್ರೆಗೆ ಹೋದಾಗ ಚಿತ್ರರಥನೆಂಬ ಗಂಧರ್ವನೊಡನೆ ಯುದ್ಧ ಮಾಡಿದಾಗಲೂ ಕೌರವರಿಗೆ ಒದಗಿದ ಸೋಲು ನಿನಗೆ ತಿಳಿದೇ ಇದೆ. ಹೀಗಿದ್ದರೂ ಮತ್ತೆ ಪಾಂಡವರೊಂದಿಗೆ ಜಗಳವನ್ನು ಹೂಡಬಹುದೆ?

೧೩೭. ಮಹಾರಾಜ, ಇದುವರೆಗೆ ನಾನು ಹೇಳಬಹುದಾದಷ್ಟು ನೀತಿ ರಹಸ್ಯವನ್ನು ಹೇಳಿದ್ದೇನೆ. ಇದಕ್ಕೂ ಮೇಲ್ಪಟ್ಟು ತತ್ತ್ವವಿಚಾರವನ್ನು ಬಯಸುವೆಯಾದರೆ, ಸನತ್ಸುಜಾತರನ್ನು ನೆನೆದುಕೊ. ಅವರು ಬಂದು ಮೋಕ್ಷಕಾರಣವಾದ ಬ್ರಹ್ಮವಿದ್ಯೆಯನ್ನು ಬೋಧಿಸಿ, ನಿನ್ನ ಮನಸ್ಸಿನ ಕಳವಳವನ್ನು ಹೋಗಲಾಡಿಸುವರು.

ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಸಂವರ್ಧನೆ ಹಾಗೂ ಸಂರಕ್ಷಣೆಗಾಗಿ ಕಳೆದ ತೊಂಬತ್ತು ವರ್ಷಗಳಿಂದ ಶ್ರಮಿಸುತ್ತ ಬಂದಿರುವ ಏಕೈಕ ಪ್ರಾತಿನಿಧಿಕ ಸಂಸ್ಥೆ: ಕನ್ನಡ ಸಾಹಿತ್ಯ ಪರಿಷತ್ತು.

ಪರಿಷತ್ತಿನ ಬಹುಮುಖೀ ಅಸ್ತಿತ್ವದ ಒಂದು ಪ್ರಧಾನ ಕಾರ್ಯಕ್ಷೇತ್ರ: ಪುಸ್ತಕ ಪ್ರಕಟನೆ. ಈವರೆಗೆ ಒಂದು ಸಾವಿರಕ್ಕೂ ಹೆಚ್ಚು ಅಮೂಲ್ಯ ಕೃತಿಗಳು ಪ್ರಕಟಗೊಂಡು ನಾಡಿನ ತುಂಬ ಅಕ್ಷರದ ಬೆಳಕನ್ನು ಹರಡಿವೆ. ಕನ್ನಡ ಜನತೆ ಕೂಡ ಅತ್ಯಂತ ಪ್ರೀತಿಯಿಂದ ಈ ಜ್ಞಾನ ದಾಸೋಹದಲ್ಲಿ ಪಾಲುಗೊಂಡಿದೆ.

ಕನ್ನಡ ಓದುಗರ ಒತ್ತಾಸೆಯಿಂದಾಗಿ ಪರಿಷತ್ತಿನ ಪ್ರಕಟಣೆಗಳು ಮರುಮುದ್ರಣಗೊಳ್ಳುತ್ತಲೇ ಇವೆ. ಅಂಥದೊಂದು ಅಮೂಲ್ಯ ಕೃತಿ: **ವಿದುರ ನೀತಿ**